ಹೊಂಗನಸು

ಬಿ.ಎಂ.ಶ್ರೀ ಪ್ರತಿಷ್ಠಾನದ ವಾರ್ತಾಪತ್ರ

ಹೊಂಗನಸು – 58

ಸಂಪುಟ: ೦೬ ಸಂಚಿಕೆ: ೮ Vol. 06 Issue 8 | ನವೆಂಬರ್ ೨೦೧೯ November 2019 | ಪುಟಗಳು ೮ Pages - 8 | ವಾರ್ಷಿಕ ಚಂದ ರೂ. ೨೦/- A. Sub. - Rs. 20/- | ಸಂಪಾದಕರು : ಶ್ರೀ ಬಿ. ಆರ್. ರವೀಂದ್ರನಾಥ್ Editor : Sri. B.R. Ravindranath

ದಿ॥ ಪ್ರೊ ಎಂ.ವಿ. ಸೀತಾರಾಮಯ್ಯ
ಸಂಸ್ಥಾಪಕರು

ಪ್ರೊ. ಎಂ. ಎಚ್. ಕೃಷ್ಣಯ್ಯ
ಗೌರವಾಧ್ಯಕ್ಷರು
ಮೊ : ೯೯೪೫೬೫೮೮೮೫

ಪದಾಧಿಕಾರಿಗಳು

ಅಧ್ಯಕ್ಷರು
ಡಾ. ಆರ್. ಲಕ್ಷ್ಮೀನಾರಾಯಣ
ಮೊ : ೯೪೪೯೦೨೮೮೯೬

ಗೌ॥ ಕಾರ್ಯದರ್ಶಿಗಳು :
ಡಾ. ವಿಜಯಾ ಸುಬ್ಬರಾಜ್
ಮೊ : ೯೯೮೬೯೨೮೮೭೬

ಶ್ರೀ ಬಿ. ಆರ್. ರವೀಂದ್ರನಾಥ್
ಮೊ : ೯೪೪೮೩೬೬೮೮

ಕೋಶಾಧ್ಯಕ್ಷರು
ಡಾ॥ ಎಸ್. ಅನಿಲ್ ಕುಮಾರ್
ಮೊ : ೯೯೬೪೪೫೯೫೫

ಹಸ್ತಪ್ರತಿ ವಿಭಾಗದ ಸಂಯೋಜನಾಧಿಕಾರಿ
ಶ್ರೀ ಬಿ.ಎಸ್. ಗುರುಪ್ರಸಾದ್
ಮೊ : ೯೫೩೫೮೯೭೩೩೭

ಚಂದಾ ವಿವರಗಳು

ವಾರ್ಷಿಕ ಚಂದಾ
ರೂ. ೨೦/-

ಐದು ವರ್ಷಗಳ ಚಂದಾ
ರೂ. ೧೦೦/-

ವಿಳಾಸ

ಬಿ.ಎಂ.ಶ್ರೀ. ಪ್ರತಿಷ್ಠಾನ
ಸ್ಥಾಪನೆ : ೦೬-೦೫-೧೯೭೯
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ:೨೬೬೧೫೮೮೭, ೨೬೬೭೬೬೭೩
ಇಮೇಲ್ : bmsritrust@gmail.com
web: www.bmshri.org
ಕಛೇರಿ ಸಮಯ:
ಮಧ್ಯಾಹ್ನ 12–30ರಿಂದ ಸಂಜೆ 7–30ಗಂಟೆ.
ವಾರದ ರಜೆ: ಮಂಗಳವಾರ

'ಹೊಂಗನಸು' ಓದುಗರಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

೨೦-೧೦-೨೦೧೯

ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ ಮತ್ತು ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭ

ಪ್ರಶಸ್ತಿ ಪ್ರದಾನ : ಡಾ. ಕೆ. ಪುಟ್ಟಸ್ವಾಮಿ
ಯುವ ಬರಹಗಾರ ಪ್ರಶಸ್ತಿ ಪುರಸ್ಕೃತರು : ಸ್ವಾಮಿ ಪೊನ್ನಾಚಿ
ಅನುವಾದ ಪ್ರಶಸ್ತಿ ಪುರಸ್ಕೃತರು : ಸಂತೆ ನಾರಾಯಣಸ್ವಾಮಿ

೨೦-೧೦-೨೦೧೯ರಂದು ಅತ್ಯಂತ ಸಂಭ್ರಮದ ದಿನ. ಕಾರಣ ಪ್ರತಿಷ್ಠಾನದ ಅತ್ಯಂತ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲೊಂದಾದ ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ ಮತ್ತು ಶಾ. ಬಾಲುರಾವ್ ಅನುವಾದ ಪ್ರಶಸ್ತಿಗಳನ್ನು ಪ್ರದಾನ ಮಾಡಿದ ದಿನ. ಅಮೂಲ್ಯ ಅವರ ನಾಡಗೀತೆಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರತಿಷ್ಠಾನದ ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಪ್ರತಿಷ್ಠಾನ ಐವತ್ತಕ್ಕೂ ಹೆಚ್ಚು ದತ್ತಿ ಉಪನ್ಯಾಸ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ಬಗ್ಗೆ ತಿಳಿಸಿ ಆ ಎಲ್ಲ ಕಾರ್ಯಕ್ರಮಗಳಿಗೆ ಮಕುಟಪ್ರಾಯವಾಗಿರುವ ಒಂದು ಲಕ್ಷ ರೂ ಮೌಲ್ಯದ ಶ್ರೀ ಸಾಹಿತ್ಯ ಪ್ರಶಸ್ತಿ ಮತ್ತು ತಲಾ ಇಪ್ಪತ್ತೈದು ಸಾವಿರ ರೂ ಮೌಲ್ಯದ ಶಾ. ಬಾಲು ರಾವ್ ಪ್ರಶಸ್ತಿಗಳನ್ನು ಸ್ಥಾಪಿಸಿರುವ ಬಾಲುರಾವ್ ಅವರ ಶ್ರೀಮತಿ ಮತ್ತು ಬಿ. ಎಂ.ಶ್ರೀ ಅವರ ಮೊಮ್ಮಗಳು ಶ್ರೀಮತಿ ಕಮಲಿನಿ ಬಾಲುರಾವ್ ಅವರ ಔದಾರ್ಯ ಮತ್ತು ಸಾಹಿತ್ಯ ಪ್ರೀತಿಗಳನ್ನು ಸ್ಮರಿಸಿಕೊಂಡು ಸಭೆಯಲ್ಲಿ ಹಾಜರಿದ್ದ ಅವರನ್ನು ಸ್ವಾಗತಿಸಿದರು. ಶ್ರೇಷ್ಠ ಅನುವಾದಕರೂ, ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ 'ಇಂಡಿಯನ್ ಲಿಟರೇಚರ್' ಪತ್ರಿಕೆಯ ಸಂಪಾದಕರೂ ಆಗಿದ್ದ ಬಾಲುರಾಯರ ಸಾಹಿತ್ಯ ಸೇವೆಯ ಪರಿಚಯ ಮಾಡಿಕೊಟ್ಟು ಪ್ರಶಸ್ತಿ ಪ್ರದಾನ ಮಾಡಲು ಬಂದಿದ್ದ ಅತಿಥಿಗಳೂ, ಖ್ಯಾತ ಅನುವಾದಕರು ಮತ್ತು ಬಿಡಿಎಯ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿಗಳೂ ಆದ ಡಾ. ಕೆ.ಪುಟ್ಟಸ್ವಾಮಿ, ಹಾಗೂ ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ ವಿಜೇತರಾದ ಶ್ರೀ ಸ್ವಾಮಿ ಪೊನ್ನಾಚಿ, ಅನುವಾದ ಪ್ರಶಸ್ತಿ ವಿಜೇತರಾದ ಶ್ರೀ ಸಂತೆ ನಾರಾಯಣ ಸ್ವಾಮಿ ಮತ್ತು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಪ್ರೊ. ಎಂ.ಎಚ್ ಕೃಷ್ಣಯ್ಯ ಅವರುಗಳ ಪರಿಚಯ ಮಾಡಿಕೊಟ್ಟು ಸ್ವಾಗತಿಸಿದರು. ಸಮಾರಂಭಕ್ಕೆ ಬಂದಿದ್ದ ಅಪಾರ ಸಂಖ್ಯೆಯ ಸಭಾಸದರು ಮತ್ತು ಪತ್ರಕರ್ತರನ್ನು ಸ್ವಾಗತಿಸಿದರು.

ಪ್ರಶಸ್ತಿ ಪ್ರದಾನ ಮಾಡಿದ ಡಾ. ಕೆ. ಪುಟ್ಟಸ್ವಾಮಿ ಅವರು ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆ ನೀಡುತ್ತಿರುವ ಅನುವಾದ ಕ್ಷೇತ್ರಕ್ಕೆ ಉತ್ತೇಜನ ನೀಡಬೇಕು ಎಂದು ಅಭಿಪ್ರಾಯ ಪಟ್ಟರು. ಪ್ರಶಸ್ತಿ ಪುರಸ್ಕೃತರಲ್ಲೊಬ್ಬರಾದ ಸಂತೆ ನಾರಾಯಣ ಸ್ವಾಮಿ ಅವರು ಇತ್ತೀಚೆಗೆ ಪ್ರಾದೇಶಿಕ ನೆಲೆಗಟ್ಟಿನಲ್ಲಿ ಕಥನ ಕಟ್ಟುವ ಕ್ರಮ ಮರೆಯಾಗುತ್ತಿದೆ, ಯುವ ಬರಹಗಾರರು ಕಥೆಗಾರರು ಹಾಗೂ ಅನುವಾದಕರು ಈ ಕೊರತೆ ನೀಗಿಸಬೇಕು ಎಂದು ಹೇಳಿದರು.

ಬಿ.ಎಚ್.ಎಸ್. ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಎಸ್. ಎಲ್. ಮಂಜುನಾಥ್ ಅವರು ಪ್ರಶಸ್ತಿ ಪುರಸ್ಕೃತರ ಕೃತಿಗಳನ್ನು ಕುರಿತು ವಿಸ್ತಾರವಾಗಿ ಪರಿಚಯಿಸಿಕೊಟ್ಟರು.

೭ನೇ ಪುಟಕ್ಕೆ

ಸಂಪಾದಕೀಯ

ಎಲ್ಲಾ ಹೊಂಗನಸು ಓದುಗರಿಗೆ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.

ಕನ್ನಡ ರಾಜ್ಯೋತ್ಸವದ ಹರ್ಷ ಎಲ್ಲೆಡೆ ಕಾಣಿಸುತ್ತಿದೆ. ಕಳೆದ ವರ್ಷದ ನವೆಂಬರ್ ತಿಂಗಳಿಗೂ ಈ ವರ್ಷದ ನವೆಂಬರ್ ತಿಂಗಳಿಗೂ ಏನು ವ್ಯತ್ಯಾಸ, ಪ್ರಗತಿ ಏನಾಗಿದೆ, ಹೊಸದು ಏನು ಇತ್ಯಾದಿ ಪ್ರಶ್ನೆಗಳಿಗೆ ಸಮಂಜಸ ಉತ್ತರಗಳಿಲ್ಲ.

ಈ ವರ್ಷ ಕೇಳಿ ಬರುತ್ತಿರುವ ಹೊಸ ಸುದ್ದಿಯೆಂದರೆ ಡಾ.ಸರೋಜಿನಿ ಮಹಿಷಿ ಸಮಿತಿ ವರದಿ ಆಧಾರದ ಮೇಲೆ ಖಾಸಗಿ ವಲಯದಲ್ಲಿಯೂ ನಮ್ಮ ರಾಜ್ಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಒದಗಿಸುವುದು. ಡಾ. ಸರೋಜಿನಿ ಮಹಿಷಿ ಸಮಿತಿಯು ೧೯೮೬ ರಲ್ಲಿ ೫೮ ಸಲಹೆಗಳನ್ನು ಒಳಗೊಂಡ ವರದಿಯನ್ನು ಭಾಗಶಃ ಅಂಗಿಕರಿಸಿದ ಕರ್ನಾಟಕ ಸರ್ಕಾರವು ೪೫ ಸಲಹೆಗಳಿಗೆ ಒಪ್ಪಿಗೆ ಸೂಚಿಸಿರುತ್ತದೆ. ಈ ರೀತಿ ಒಪ್ಪಿಗೆ ಸೂಚಿಸಿರುವ ಸಲಹೆಗಳನ್ನು ಅನುಷ್ಠಾನಗೊಳಿಸಲು ೩೩ ವರ್ಷಗಳ ನಂತರವೂ ಸಾಧ್ಯವಾಗಿಲ್ಲದಿರುವುದು ಬಹಳ ಖೇದಕರವಾಗಿರುತ್ತದೆ.

ಕರ್ನಾಟಕದಲ್ಲಿ ಉದ್ಯೋಗ ಮೀಸಲಾತಿ ಯಾರಿಗೆ ಲಭ್ಯ ಎಂಬುದರ ಬಗ್ಗೆ ಕೆಲ ಗೊಂದಲ/ಸಂದೇಹಗಳಿವೆ.

೧. ಕನ್ನಡ ಭಾಷೆಯನ್ನು ಬಲ್ಲವರಿಗೆ ಅನ್ವಯಗೊಳ್ಳುತ್ತದೆಯೇ?: ಕನ್ನಡ ಭಾಷೆಯನ್ನು ಬಲ್ಲವರಿಗೆ ಮೀಸಲಾತಿ ನೀಡುವುದಾದರೆ ಉದ್ಯೋಗಕ್ಕಾಗಿ ಅರ್ಜಿ ಹಾಕಿರುವ ಅಭ್ಯರ್ಥಿಗಳಿಗೆ ಕನ್ನಡ ಭಾಷೆಯ ಪರೀಕ್ಷೆ ನಡೆಸಬೇಕಾಗುತ್ತದೆ. ಹಾಗೆ ನಡೆಸಿದ ಪರೀಕ್ಷೆಯಲ್ಲಿ ಪರರಾಜ್ಯದ ಅಭ್ಯರ್ಥಿಗಳು ಕನ್ನಡ ಭಾಷೆಯನ್ನು ಹೊಸದಾಗಿ ಕಲಿತು ಭಾಗವಹಿಸಿ ತೇರ್ಗಡೆ ಹೊಂದಿದರೆ ಮೀಸಲಾತಿ ಅನ್ವಯಗೊಳ್ಳುತ್ತದೆಯೇ?

೨. ಕನ್ನಡ ಮಾತೃ ಭಾಷೆಯ ಅಭ್ಯರ್ಥಿಗಳಿಗೆ ಮೀಸಲಾತಿ ಅನ್ವಯಗೊಳ್ಳುತ್ತದೆಯೇ? ಕನ್ನಡ ಮಾತೃ ಭಾಷೆ ಹೊಂದಿರುವ ಲಕ್ಷಾಂತರ ಕನ್ನಡಿಗರು ವಿಶ್ವಾದ್ಯಂತ ಇರುತ್ತಾರೆ. ಎಷ್ಟೋ ಕನ್ನಡಿಗರ ಕುಟುಂಬಗಳು ಕರ್ನಾಟಕದ ಮಣ್ಣಿನ ಮೇಲೆ ಕಾಲಿಟ್ಟು ದಶಕಗಳೇ ಕಳೆದುಹೋಗಿರುತ್ತವೆ. ಅಂತಹವರಿಗೆ ಯಾವ ರೀತಿಯ ಮೀಸಲಾತಿ ಲಭ್ಯಗೊಳಿಸಬೇಕು?

೩. ಕರ್ನಾಟಕದಲ್ಲಿ ಇಂತಿಷ್ಟು ವರ್ಷ ನೆಲಸಿದವರಿಗೆ ಅನ್ವಯಗೊಳ್ಳುತ್ತದೆಯೇ? ಕರ್ನಾಟಕದಲ್ಲಿಯೇ ಹಲವಾರು ದಶಕಗಳ ಕಾಲ ನೆಲೆಸಿರುವ ಆದರೆ ಕನ್ನಡದ ಒಂದು ಅಕ್ಷರವೂ ಬಾರದಿರುವ ಎಷ್ಟೋ ಪರರಾಜ್ಯದವರು ಇದ್ದಾರೆ. ಅಂತಹವರಿಗೆ ಯಾವ ರೀತಿಯ ಮೀಸಲಾತಿ ಲಭ್ಯಗೊಳಿಸಬೇಕು?

– ಬಿ.ಆರ್.ರವೀಂದ್ರನಾಥ

ಎಂ. ವಿ. ಸೀತಾರಾಮಯ್ಯ –ಬದುಕು – ಒಂದು ನೋಟ – ೮

ಡಾ. ಪಿ.ವಿ. ನಾರಾಯಣ

೧೯೮೪ ಸೀತಾರಾಮಯ್ಯನವರ ಗುರುಗಳಾದ ಬಿ.ಎಂ.ಶ್ರೀ. ಅವರ ನೂರರ ಹುಟ್ಟುಹಬ್ಬದ ವರುಷ, ಜನ್ಮ ಶತಮಾನೋತ್ಸವ. ಈ ಕಾರಣಕ್ಕಾಗಿಯೇ ಅವರು ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ ಕಟ್ಟಿದರೇನೋ. ಬಿಎಂಶ್ರೀ ಅವರ ಹಿರಿಯರ ಊರು ಬೆಳ್ಳೂರು, ಅವರು ಹುಟ್ಟಿದೂರು ಸಂಪಿಗೆ ಬೆಳ್ಳೂರಿನಲ್ಲಿಯೇ ಜನ್ಮಶತಮಾನೋತ್ಸವನ್ನಾಚರಿಸಬೇಕೆಂಬುದ ಅವರ ಕನಸು. ಹೀಗಾಗಿ ಮಾಸ್ತಿ ಮುಂತಾದ ಹಿರಿಯ ಸಾಹಿತಿಗಳು, ಎಚ್.ಎಲ್. ನಾಗೇಗೌಡ ಮುಂತಾದ ಅಧಿಕಾರಿಗಳು, ಚಂದ್ರಶೇಖರ್ ಮುಂತಾದ ರಾಜಕಾರಣಿಗಳು, ಆದಿ ಚುಂಚನಗಿರಿ ಮಠದ ಸ್ವಾಮಿಗಳು – ಹೀಗೆ ಎಲ್ಲರ ನೆರವು ಪಡೆದು ಅವರು ಬೆಳ್ಳೂರಿನಲ್ಲಿಯೇ ಸಮಾರಂಭವನ್ನು ಏರ್ಪಡಿಸಿದರು. ಸೀತಾರಾಮಯ್ಯನವರು ಅಜಾತ ಶತ್ರುಗಳಾದ್ದರಿಂದ ಎಲ್ಲರೂ ಅವರೊಡನೆ ಕೈಜೋಡಿಸಿದರು. ಬೆಂಗಳೂರಿನಿಂದ ನೂರಾರು ಮಂದಿ ಅಲ್ಲಿಗೆ ಹೋಗಿ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಆ ಮುಂದೆ ಬೆಳ್ಳೂರು ಹಾಗೂ ಸಂಪಿಗೆಗಳಲ್ಲಿ ಸೀತಾರಾಮಯ್ಯನವರ ಅದಮ್ಯ ಕರ್ತೃತ್ವ ಶಕ್ತಿಯ ಪ್ರತೀಕವಾಗಿ ಶ್ರೀ ಅವರ ಸ್ಮಾರಕ ಭವನಗಳು ತಲೆ ಎತ್ತಿ ನಿಂತವು.

ಹೀಗೆ, ತಮ್ಮ ಬಾಳಿನ ಏಳುಬೀಳುಗಳ ನಡುವೆ ಹಾಗೂ ದೀರ್ಘಕಾಲದ ಅನಾರೋಗ್ಯದ ನಡುವೆಯೂ ಅತ್ಯಂತ ಕ್ರಿಯಾಶೀಲರಾಗಿ ಅವಿರತವಾಗಿ ಕನ್ನಡದ ಕೆಲಸವನ್ನು ಅನೇಕ ರೀತಿಗಳಲ್ಲಿ ಮುಂದುವರಿಸಿಕೊಂಡು ಬಂದ ಪ್ರೊ.ಎಂ. ವಿ. ಸೀತಾರಾಮಯ್ಯನವರು ೧೨–೦೩–೧೯೯೦ ರಂದು ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಬೆಂಗಳೂರಿನ ತಮ್ಮ ಮನೆಯಲ್ಲಿ ನಿಧನರಾದರು. ಆದರೆ ಅವರ ನೆನಪು ಅವರು ಕಟ್ಟಿದ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಹಸಿರಾಗಿ ಉಳಿದಿದೆ.ಆ ಕಾರಣದಿಂದ ೦೯–೦೯–೨೦೦೯ ರಿಂದ ೦೯–೦೯–೨೦೧೦ ರವರೆಗೆ ಅವರ ಶತಮಾನೋತ್ಸವವನ್ನು ಪ್ರತಿಷ್ಠಾನದ ಆಶ್ರಯದಲ್ಲಿ ವಿಶೇಷವಾಗಿ ರೂಪಿತವಾಗಿದ್ದ ಎಂವಿಸೀ ಜನ್ಮಶತಮಾನೋತ್ಸವ ಸಮಿತಿಯ ವತಿಯಿಂದ ನಾಡಿನ ಬೇರೆ ಬೇರೆ ಕಡೆಗಳಲ್ಲಿ ಆಚರಿಸಲಾಯಿತು. ಅವರಿಗೆ ಅತ್ಯಂತ ಪ್ರಿಯವಾಗಿದ್ದ ವಿಷಯಗಳಲ್ಲಿ ಹಸ್ತಪ್ರತಿಶಾಸ್ತ್ರವೂ ಒಂದಾಗಿದ್ದುದರಿಂದ ಅವರ ಜನ್ಮಶತಮಾನೋತ್ಸವವನ್ನು 'ಹಸ್ತಪ್ರತಿಶಾಸ್ತ್ರ ವರ್ಷ' ವೆಂದೂ ಸಂಯೋಜಿಸಿ ಆಚರಿಸಲಾಯಿತು. ನಾಡಿನ ವಿವಿಧ ಊರುಗಳ ಸಂಘಸಂಸ್ಥೆಗಳು ಹಾಗೂ ಶಾಲಾಕಾಲೇಜುಗಳ ಸಹಯೋಗದಿಂದ ನಡೆದ ಈ ಸಮಾರಂಭಗಳಲ್ಲಿ ಹಸ್ತಪ್ರತಿಗಳ ಪ್ರದರ್ಶನ ಕಾರ್ಯಕ್ರಮವೂ ಒಂದು ವರ್ಷಕಾಲ ನಿರಂತರವಾಗಿ ನಡೆದುವು. ಕರ್ನಾಟಕ ಸರ್ಕಾರ ಈ ಸಮಾರಂಭಗಳಿಗಾಗಿ ವಿಶೇಷ ಹಣ ಸಹಾಯ ನೀಡಿತು.

– ಮುಂದುವರೆಯುವುದು

ನವೆಂಬರ್ ತಿಂಗಳಿನಲ್ಲಿ ಜನಿಸಿದ ಸಾಹಿತ್ಯೋಪಾಸಕರು

ಶಿ.ಶಿ. ಬಸವನಾಳ	೩–೧೧–೧೮೯೩
ಸಂಶಿಭೂಸನೂರ ಮಠ	೭–೧೧–೧೯೧೦
ರಾಶಿ– ಡಾಎಂ ಶಿವರಾಂ	೧೦–೧೧–೧೯೦೫
ತಿರುಮಲೆ ರಾಜಮ್ಮ	೨೦–೧೧–೧೯೦೦
ಎಂ. ಎಸ್. ಪುಟ್ಟಣ್ಣ	೨೧–೧೧–೧೮೫೪
ತೀನಂ ಶ್ರೀಂತಯ್ಯ	೨೬–೧೧–೧೯೦೬
ಬಿ.ಸಿ. ರಾಮಚಂದ್ರ ಶರ್ಮಾ	೨೮–೧೧–೧೯೨೫
ಎಂ.ಎಂ. ಕಲಬುರ್ಗಿ	೨೮–೧೧–೧೯೩೮

ನವೆಂಬರ್ ತಿಂಗಳಿನಲ್ಲಿ ನಿಧನರಾದ ಸಾಹಿತ್ಯೋಪಾಸಕರು

ಬಿ.ಜಿ. ಎಲ್. ಸ್ವಾಮಿ	೨–೧೧–೧೯೮೦
ಸಂಶಿಭೂಸನೂರ ಮಠ	೬–೧೧–೧೯೯೧
ದಿನಕರ ದೇಸಾಯಿ	೭–೧೧–೧೯೮೨
ಕುವೆಂಪು	೧೦–೧೧–೧೯೯೪
ಹಾ.ಮಾ. ನಾಯಕ್	೧೦–೧೧–೨೦೦೦
ಎಂ. ಗೋಪಾಲಕೃಷ್ಣ ಅಡಿಗ	೧೪–೧೧–೧೯೯೨
ಟಿ.ಪಿ. ಕೈಲಾಸಂ	೨೩–೧೧–೧೯೪೬

ನವೆಂಬರ್ ೨೦೧೯ ರಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮಗಳು

ಸ್ಥಳ : ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ

ದಿನಾಂಕ : ೦೪-೧೧-೨೦೧೯ ಸೋಮವಾರ ಸಂಜೆ ೫-೩೦ಗಂಟೆಗೆ

ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ

ನಾಡ ಗೀತೆಗಳ ಗಾಯನ

ದಿನಾಂಕ : ೦೭-೧೧-೨೦೧೯ ಗುರುವಾರ ಸಂಜೆ ೫-೩೦ಗಂಟೆಗೆ

ಸರ್.ಸಿ. ವಿ. ರಾಮನ್ ದತ್ತಿ ಉಪನ್ಯಾಸ ಕಾರ್ಯಕ್ರಮ

ವಿಷಯ: ಸರ್. ಸಿ. ವಿ . ರಾಮನ್ ಮತ್ತು ಮೇಡಮ್ ಕ್ಯೂರಿ

ಉಪನ್ಯಾಸಕರು: ಶ್ರೀಮತಿ ನೇಮಿಚಂದ್ರ

ಖ್ಯಾತ ಲೇಖಕಿ ಮತ್ತು ಎಚ್. ಎ. ಎಲ್. ನ ನಿವೃತ್ತ ಜನರಲ್ ಮ್ಯಾನೇಜರ್

ದಿನಾಂಕ : ೧೧ -೧೧-೨೦೧೯ ಸೋಮವಾರ ಸಂಜೆ- ೫-೩೦ಗಂಟೆಗೆ

"ಅಕ್ಕರಗೊಟ್ಟಿ"-೫೬

ತಿಂಗಳ ಮುಕ್ತ ಚಿಂತನೆ

ವಿಷಯ : ಒಕ್ಕೋಟಿ ಜಿನಾಲಯಗಳು

ಚಾಲನೆ ನೀಡುವವರು : ಡಾ. ಸಿ. ಯು. ಮಂಜುನಾಥ್

ನಿವೃತ್ತ ಕನ್ನಡ ಪ್ರಾಧ್ಯಾಪಕರು

ದಿನಾಂಕ : ೧೪-೧೧-೨೦೧೯ ಗುರುವಾರ ಸಂಜೆ : ೫-೩೦ಗಂಟೆಗೆ

ಗಾಂಧಿ -೧೫೦ರ ಕಾರ್ಯಕ್ರಮ

ಉಪನ್ಯಾಸ : ಪ್ರೊ. ಎಂ.ಎಂ. ಗುಪ್ತಾ

ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು

ವಿಷಯ : ಗಾಂಧಿಯವರ ಆರ್ಥಿಕ ಚಿಂತನೆಗಳ ಪ್ರಸ್ತುತತೆ

ದಿನಾಂಕ : ೧೬-೧೧-೨೦೧೯ ಶನಿವಾರ ಸಂಜೆ : ೫-೩೦ಕ್ಕೆ

ಶ್ರೀಮತಿ ರುಕ್ಮಿಣಮ್ಮ ಸೀತಾರಾಮರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ

ವಿಷಯ: ಬೌದ್ಧ ಕಾವ್ಯ ದೃಷ್ಟಿ

ಉಪನ್ಯಾಸಕರು: ಡಾ. ನಟರಾಜ್ ಬೂದಾಳ್

ಕನ್ನಡ ಪ್ರಾಧ್ಯಾಪಕರು, ತುಮಕೂರು ವಿ. ವಿ.

ದಿನಾಂಕ : ೨೫-೧೧-೨೦೧೯ ಸೋಮವಾರ ಸಂಜೆ- ೫-೩೦ಗಂಟೆಗೆ

ತೀನಂಶ್ರೀ ವಿಶೇಷ ದತ್ತಿ ಉಪನ್ಯಾಸ

ವಿಷಯ: ತೀನಂಶ್ರೀ ಅವರ ಅನುವಾದಗಳು

ಉಪನ್ಯಾಸಕರು: ಶತಾವಧಾನಿ ಡಾ. ಆರ್. ಗಣೇಶ್

ದಿನಾಂಕ : ೨೯-೧೧-೨೦೧೯ ಶುಕ್ರವಾರ ಸಂಜೆ : ೫-೦೦ ಗಂಟೆಗೆ

ನುಡಿಯಾರಾಧಕರ ಸ್ಮರಣೆ ಕಾರ್ಯಕ್ರಮ

ಶಿ.ಶಿ. ಬಸವನಾಳ, ಸಂಶಿಭೂಸನೂರ ಮಠ, ರಾಶಿ - ಡಾ ಎಂ ಶಿವರಾಂ, ಎಂ. ಎಸ್. ಪುಟ್ಟಣ್ಣ,
ಬಿ.ಸಿ.ರಾಮಚಂದ್ರ ಶರ್ಮಾ, ಎಂ.ಎಂ.ಕಲಬುರ್ಗಿ, ಹಾ.ಮಾ.ನಾಯಕ್, ಎಂ.ಗೋಪಾಲಕೃಷ್ಣ ಅಡಿಗ, ಟಿ.ಪಿ. ಕೈಲಾಸಂ
ಅವರುಗಳ ಬದುಕು ಬರಹಗಳ ಬಗ್ಗೆ ವಿಚಾರ ಮಂಡನೆ ಸಾಹಿತ್ಯಾಭಿಮಾನಿಗಳಿಂದ



ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯಕ್ರಮಗಳು

ದಿನಾಂಕ : ೩೦-೦೯-೨೦೧೯

ಶಂಬಾಜೋಶಿ ದತ್ತಿ ಕಾರ್ಯಕ್ರಮ

ವಿಷಯ : ಶಂಬಾ ಅವರ ಕನ್ನಡ ಪ್ರಜ್ಞೆಯ ನೆಲೆಗಳು

ಉಪನ್ಯಾಸಕರು : ಡಾ. ಮಲ್ಲೇಪುರಂ.ಜಿ. ವೆಂಕಟೇಶ್

ಕರ್ನಾಟಕ ಖ್ಯಾತ ವಿದ್ವಾಂಸರು, ಸಂಸ್ಕೃತ ವಿಶ್ವವಿದ್ಯಾಲಯ ನಿವೃತ್ತ ಕುಲಪತಿಗಳು

ಪ್ರಾರಂಭದಲ್ಲಿ ಡಾ. ಆರ್ ಲಕ್ಷ್ಮೀನಾರಾಯಣ ಅವರು ದತ್ತಿ ಉಪನ್ಯಾಸದ ಸ್ಥಾಪಕರಾದ ಮಾನವ ಧರ್ಮ ಪ್ರತಿಷ್ಠಾನ ಮತ್ತು ಶ್ರೀ ಎಸ್. ಶಿವಲಿಂಗಯ್ಯ ಇವರುಗಳ ಬಗ್ಗೆ ತಿಳಿಸಿ ನಂತರ ಉಪನ್ಯಾಸಕರಾದ ಪ್ರೊ. ಮಲ್ಲೇಪುರಂ ಅವರನ್ನು ಸಭೆಗೆ ಸಂಕ್ಷಿಪ್ತವಾಗಿ ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ಪ್ರೊ.ಮಲ್ಲೇಪುರಂ ವೆಂಕಟೇಶ್ ಅವರು ತಮ್ಮ ಉಪನ್ಯಾಸದಲ್ಲಿ ಉತ್ತರ ಕರ್ನಾಟಕವೆಲ್ಲ ಮರಾಠಿಮಯವಾಗುತ್ತಿದ್ದ ಕಾಲದಲ್ಲಿ, ಶೈಕ್ಷಣಿಕ ಪಠ್ಯಗಳೆಲ್ಲ ಮರಾಠಿಮಯ ಆಗಿದ್ದಾಗ ಶಂಬಾ ಅವರು ತಮ್ಮ ಸಂಶೋಧನೆ ಪ್ರಾರಂಭಿಸಿ ಕನ್ನಡದ ಅಸ್ಮಿತೆಯನ್ನು ಅತ್ಯದ್ಭುತವಾಗಿ ಸ್ಥಾಪಿಸಿದವರು. ಶಂಬಾ ಅವರು ಇದಕ್ಕೆ ಆರಿಸಿಕೊಂಡ ಮಾರ್ಗವೆಂದರೆ ಒಂದು ವೈಧಾನಿಕತೆಯನ್ನು (methodology) ರೂಪಿಸಿಕೊಂಡು ಕನ್ನಡದ ಮೂಲಚೂಲಗಳ ಬಗ್ಗೆ ಸಂಶೋಧನೆ ನಡೆಸುವುದು. ಇದಕ್ಕಾಗಿ ಅವರು ಸ್ಥಳನಾಮಗಳ ಅಧ್ಯಯನವನ್ನು ಕೈಗೆತ್ತಿ-ಕೊಂಡು ಮರಾಠಿಯವೆಂದು ಹೇಳಲಾದ ರೂಪಗಳೆಲ್ಲ ಮೂಲತಃ ಕನ್ನಡದವೆಂದು ತೋರಿಸಿದರು. 'ಎಡೆಗಳು ಹೇಳುವ ಕಥೆ' ಈ ಸ್ಥಳನಾಮಗಳ ಅಧ್ಯಯನವನ್ನೇ ಕುರಿತಾದ ಬರಹ. ಕನ್ನಡದ ಹಬ್ಬ ಹರಿದಿನಗಳಾದ ಎತ್ತಿನ ಹಬ್ಬದಂಥ ಆಚರಣೆಗಳು, ಶಾಸನಗಳಲ್ಲಿ ಕಂಡುಬರುವ ಪ್ರಯೋಗಗಳು ಇವನ್ನೆಲ್ಲ ಒಟ್ಟುಗೂಡಿಸಿ ರೂಪಿಸಿದ ವೈಧಾನಿಕತೆ ಅವರದು. 'ಕಂನುಡಿಯ ಹುಟ್ಟು', 'ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ', 'ಹಾಲುಮತ ದರ್ಶನ' ಇವೆಲ್ಲ ಕನ್ನಡದ ಅಸ್ಮಿತೆಯ ಹುಡುಕಾಟದಲ್ಲಿ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಅವರು ರಚಿಸಿದ ಗ್ರಂಥಗಳು. ಮರಾಠಿಮಯವಾಗಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡಿಗರಿಗೆ ಕನ್ನಡದ ಅಸ್ಮಿತೆಯನ್ನು ಸ್ಥಾಪಿಸಿಕೊಡುವ ಮೂಲಕ ಅವರಲ್ಲಿ ಕನ್ನಡ ಪ್ರಜ್ಞೆಯನ್ನು ನೆಲೆಗೊಳಿಸುವ ಮಹತ್ಕಾರ್ಯವನ್ನು ಅವಿಶ್ರಾಂತವಾಗಿ ಮಾಡಿದವರು ಎಂದು ಹೇಳಿ ೨೧ನೇ ಶತಮಾನದಲ್ಲಿ ಇಂದು ನಾವು ಹೊರಗಿನಿಂದ ಬರುತ್ತಿರುವ ಅನ್ಯಭಾಷಿಕ ವಲಸಿಗರಿಂದ ಕನ್ನಡದ ಅಸ್ತಿತ್ವಕ್ಕೆ ಆಗುತ್ತಿರುವ ಧಕ್ಕೆ, ಹಿಂದಿ ಇಂಗ್ಲಿಷ್, ಮತ್ತಿತರೆ ಭಾಷಿಕರಿಂದ ಆಗುತ್ತಿರುವ ಆಕ್ರಮಣದಂಥ ಆತಂಕಕಾರಿ ಸಂದರ್ಭವನ್ನು ನಾವು ಹೇಗೆ ಎದುರಿಸುವುದು, ನಮ್ಮ ಕನ್ನಡದ ಅಸ್ಮಿತೆಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬ ಜ್ವಲಂತ ಪ್ರಶ್ನೆ ನಮ್ಮೆದುರು ಇದೆ ಎಂದು ಹೇಳಿದರು. ಶಂಬಾ ಅವರ ಸಂಶೋಧನೆಯ ವೈಧಾನಿಕತೆಯನ್ನು ಆಗಿನ ಕನ್ನಡದ ವಿದ್ವಾಂಸರಾದ ಡಿವಿಜಿ, ಡಿ.ಎಲ್. ಎನ್ ಮೊದಲಾದವರು ಶ್ಲಾಘಿಸಿದ್ದರು ಎಂದು ತಿಳಿಸಿ ತಮ್ಮ

ಉಪನ್ಯಾಸವನ್ನು ಪೂರ್ಣಗೊಳಿಸಿದರು. ಡಾ. ವಿಜಯಾ ಸುಬ್ಬರಾಜ್ ವಂದನಾರ್ಪಣೆ ಮಾಡಿದರು.

ದಿನಾಂಕ : ೨೬-೦೯-೨೦೧೯

ನುಡಿಯಾರಾಧಕರ ಸ್ಮರಣೆ ಕಾರ್ಯಕ್ರಮ

ಎಂ.ಆರ್. ಶ್ರೀನಿವಾಸ ಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ದಿನಕರ ದೇಸಾಯಿ, ಶ್ರೀರಂಗ, ತೀ.ನಂ.ಶ್ರೀಂಠಯ್ಯ, ತಿರುಮಲೆ ರಾಜಮ್ಮ, ಶಂಬಾಜೋಶಿ ಅವರುಗಳ ಬದುಕು ಬರಹಗಳ ಬಗ್ಗೆ ವಿಚಾರ ಮಂಡನೆ ಸಾಹಿತ್ಯಾಭಿಮಾನಿಗಳಿಂದ ನುಡಿಯಾರಾಧಕರ ಬದುಕು ಬರಹಗಳ ಬಗ್ಗೆ ವಿಚಾರ ಮಂಡನೆಗಳ ವಿವರ:

ಎಂ.ಆರ್. ಶ್ರೀನಿವಾಸ ಮೂರ್ತಿ – ಶ್ರೀ ಕೆ.ಎನ್.ಮಹಾಬಲ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ದಿನಕರ ದೇಸಾಯಿ, ಶ್ರೀರಂಗ –ಡಾ. ಆರ್. ಲಕ್ಷ್ಮೀನಾರಾಯಣ

ಶಂಬಾಜೋಶಿ, ಎಂ.ಆರ್.ಶ್ರೀನಿವಾಸ ಮೂರ್ತಿ, ತಿರುಮಲೆ ರಾಜಮ್ಮ – ಪ್ರೊ. ಜಿ. ಅಶ್ವತ್ಥನಾರಾಯಣ

ತಿರುಮಲೆ ರಾಜಮ್ಮ – ಶ್ರೀ ಬಿ.ಆರ್.ರವೀಂದ್ರನಾಥ

ತಿ.ನಂ.ಶ್ರೀಕಂಠಯ್ಯ – ಶ್ರೀಮತಿ ವಸಂತ

ಪ್ರತಿಷ್ಠಾನದಲ್ಲಿ ಸರಸ್ವತಿ ಪೂಜೆ ಹಾಗೂ ಆಯುಧ ಪೂಜೆ

ದಿನಾಂಕ ೦೬ನೇ ಅಕ್ಟೋಬರ್ ೨೦೧೯ ರಂದು ಪ್ರತಿಷ್ಠಾನದಲ್ಲಿ ಸರಸ್ವತಿ ಪೂಜೆ ಹಾಗೂ ಆಯುಧ ಪೂಜೆಗಳನ್ನು ಆಚರಿಸಲಾಯಿತು. ಈ ಸರಳ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳು, ಕೆಲವು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಕ್ತಿ ಭಾವದಿಂದ ಆಚರಿಸಿದರು.

ಲೇಖಿಕಾ ಸಾಹಿತ್ಯ ವೇದಿಕೆ ಸಹಯೋಗ

ಬಿ.ಎಂ.ಶ್ರೀ ಪ್ರತಿಷ್ಠಾನ

ದಿನಾಂಕ : ೫-೧೦-೨೦೧೯

ಹೊಸ ಓದು ಮತ್ತು ಸಂವಾದ

ಪ್ರಪ್ರಥಮ ಕಾರ್ಯಕ್ರಮ

ಲೇಖಿಕಾ ವೇದಿಕೆ, ಬಿ.ಎಂ.ಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ, ಉದ್ಘಾಟನಾ ಸಮಾರಂಭವನ್ನೂ, ಈ ವೇದಿಕೆಯ ಸಂಸ್ಥಾಪಕಿಯಾದ, ಶ್ರೀಮತಿ ಶೈಲಜಾ ಸುರೇಶ್ ಅವರು ತಮ್ಮ ಮಾಧವಿ ಕಥೆಯ ವಾಚನ ಮತ್ತು ಸಂವಾದವನ್ನು

ಏರ್ಪಡಿಸಿದ್ದರು. ಡಾ.ವಿಜಯಾ ಸುಬ್ಬರಾಜ್ ಅವರಿಂದ ಉದ್ಘಾಟನೆಯಾದ ನಂತರ, 'ಮಾಧವಿ' ಕಥೆಯ ವಾಚನವನ್ನು ಶೈಲಜಾ ಸುರೇಶ್ ಮಾಡಿದ ನಂತರ ಸಾಹಿತ್ಯಾಸಕ್ತರನ್ನು ಸಂವಾದಕ್ಕೆ ಆಹ್ವಾನಿಸಿದರು. ಜೊತೆಗೆ ಸಂವಾದಕ್ಕೆ ಮುನ್ನ, 'ಮಾಧವಿ' ಕಥೆಯ ಹಿಂದಿನ ಆಶಯಗಳನ್ನು ಮತ್ತು ಕಥಾನಾಯಕಿ ಮಾಧವಿ ಅನುಭವಿಸಿದ ಪುರುಷ ಶೋಷಣೆಯ ಸ್ವರೂಪವನ್ನು ವಿವರಿಸಿದರು. ಈ ಶೋಷಣೆ ಎನ್ನುವುದು ಅವ್ಯಾಹತವಾಗಿ ನಡೆಯುತ್ತಲೇ ಬಂದಿರುವುದನ್ನು ಗಮನಕ್ಕೆ ತಂದರು.ಯಾವ ಸ್ತ್ರೀವಾದಿ ಹೋರಾಟಗಳೂ ಸಫಲವಾಗಿಲ್ಲ. ಸ್ತ್ರೀವಾದ ಅನ್ನುವುದೇ ಪ್ರಸ್ತುತತೆ ಮತ್ತು ಅರ್ಥವನ್ನು ಕಳೆದುಕೊಂಡಿದೆ ಎನ್ನುವ ಅಭಿಪ್ರಾಯವನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ವಿಜಯಾ ಸುಬ್ಬರಾಜ್ ಅವರು ವ್ಯಕ್ತಪಡಿಸಿದರು. ಸಭಿಕರೆಲ್ಲರೂ ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಕಾರ್ಯಕ್ರಮಕ್ಕೆ ಯಶಸ್ಸನ್ನು ತಂದು ಕೊಟ್ಟರು. ಅಂತಿಮವಾಗಿ ಇಂದಿರಾಶರಣ್ ಸೊಗಸಾಗಿ ನಿರೂಪಣೆ ಮಾಡಿದರು. ಶೈಲಜಾಪ್ರಸಾದ್‌ರು ಸ್ವಾಗತಿಸಿದರು. ವಿಜಯಾಗುರುರಾಜ್ ಅತಿಥಿಗಳನ್ನು ಪರಿಚಯಿಸಿದರು; ಶಾಂತಲಾ ಸತೀಶ್ ವಂದನಾರ್ಪಣೆ ಸಲ್ಲಿಸಿದರು.

೧೦-೧೦-೨೦೧೯

ಅಕ್ಕರಗೊಟ್ಟಿ ಕಾರ್ಯಕ್ರಮ-೫೫

ವಿಷಯ: 'ಇರಳು ತಪ್ಪು', 'ಘಟಸ್ಫೋಟ' ನುಡಿಗಟ್ಟುಗಳ ಸಾಂಸ್ಕೃತಿಕ ವಿಶ್ಲೇಷಣೆ

ಚಾಲನೆ ನೀಡಿದವರು: ಡಾ. ಎನ್.ಆರ್. ಲಲಿತಾಂಬ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,.

ದಿನಾಂಕ ೧೦/೧೦/೨೦೧೯ ರಂದು ಸಂಜೆ ನಡೆದ ಅಕ್ಕರಗೊಟ್ಟಿ ಕಾರ್ಯಕ್ರಮದಲ್ಲಿ ಡಾ. ಎನ್ ಆರ್ ಲಲಿತಾಂಬರವರು 'ಇರುಳು ತಪ್ಪು', 'ಘಟಸ್ಫೋಟ' -ನುಡಿಗಟ್ಟುಗಳ ಸಾಂಸ್ಕೃತಿಕ ವಿಶ್ಲೇಷಣೆ' ಎಂಬ ವಿಷಯವನ್ನು ಕುರಿತು ಪ್ರಸ್ತಾಪಿಸುತ್ತಾ ವಿಜಯನಗರೋತ್ತರ ಕಾಲಮಾನದ ಕರ್ನಾಟಕದ ಸಮಾಜೋ-ಧಾರ್ಮಿಕ ಸ್ಥಿತಿಗತಿಗಳು, ಸಾಂಪ್ರದಾಯಿಕ ಧರ್ಮಪೀಠಗಳು,

ಪ್ರಭುತ್ವ ಮಹಿಳೆಯರನ್ನು ಕುರಿತು ಹೊಂದಿದ್ದ ಧೋರಣೆಗಳು, ವಸಾಹತುಶಾಹಿ ಆಡಳಿತದಲ್ಲಿ ಬದಲಾಗುತ್ತಿದ್ದ ರಾಜಕೀಯ, ಸಾಮಾಜಿಕ ವಾತಾವರಣ ತಂದೊಡ್ಡಿದ ಹೊಸ ಸಮಸ್ಯೆಗಳು- ಸವಾಲುಗಳು ಎಂತಹವು ಇತ್ಯಾದಿ ವಿಷಯಗಳನ್ನು ಕುರಿತಂತೆ ತಿಳಿದುಕೊಳ್ಳಲು ನಮಗೆ ಕನ್ನಡದ ಕಡತಗಳು ಅಮೂಲ್ಯ ಆಕರಗಳಾಗಿವೆ. ಈಗಾಗಲೇ ಪ್ರಕಟಗೊಂಡಿರುವ ಕರ್ನಾಟಕದ ಅನೇಕ ಶ್ರೀ ಮಠಗಳ ಕಡತಗಳು ಮಹಿಳೆಯರನ್ನು ಕುರಿತಂತೆ, ಅವರ ಬದುಕು, ಬವಣೆ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಮಹಿಳೆಯರಿಗೆ ಇದ್ದ ಧಾರ್ಮಿಕ ಸಾಮಾಜಿಕ ಕಟ್ಟುಪಾಡುಗಳು ಮತ್ತು ಅವಕಾಶಗಳನ್ನು ಕುರಿತಂತೆ ಅನೇಕ ದಾಖಲೆಗಳಿವೆ. ಇಂತಹ ವಿಷಯಗಳನ್ನು ಕುರಿತ ಮಾಹಿತಿ ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ದೊರೆಯುವುದು ವಿರಳ. ಮಠದ ದಾಖಲೆಗಳಲ್ಲಿ ಜಾತಿ ಧರ್ಮ, ಸಂಸ್ಕಾರ ಆಚರಣೆಗಳ ಕಟ್ಟುಕಟ್ಟಳೆಗಳ ಜೊತೆಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ 'ಇರುಳು ತಪ್ಪು 'ಹಾಗೂ ಘಟಕ್ರಿಯೆ/ ಘಟಸ್ಫೋಟ ಎಂಬ ಪದಗಳನ್ನು ಕುರಿತು ಅವುಗಳ ಅರ್ಥ ಮತ್ತು ಸಾಮಾಜಿಕವಾಗಿ ಆ ಪದಗಳು ಪಡೆದುಕೊಂಡಿರುವ ಅರ್ಥವ್ಯಾಪ್ತಿ ಮತ್ತು ಸಂಬಂಧಿತ ಆಚರಣೆಗಳನ್ನು ಕುರಿತಂತೆ ಪರಿಚಯಿಸಿದರು.

ಕರ್ನಾಟಕದ ಶ್ರೀಮಠಗಳಲ್ಲಿನ ಕಡತಗಳಲ್ಲಿ 'ಇರುಳು ತಪ್ಪಿ' ಗೆ ಸಂಬಂಧಿಸಿ ಮುಚ್ಚಳಿಕೆ ಪತ್ರಗಳು ಬಿನ್ನಹಗಳು, 'ಘಟಕ್ರಿಯೆ', 'ಘಟಸ್ಫೋಟ'ಗಳಿಗೆ ಸಂಬಂಧಿಸಿದ ದೂರುಗಳು, ತೀರ್ಮಾನಗಳು ಇತ್ಯಾದಿಗಳನ್ನು ಕೆಲವು ದಾಖಲೆಗಳನ್ನು ಓದುವ ಮೂಲಕ ವಿಶ್ಲೇಷಿಸಿದರು. ರಾಜಾವಳಿಕಥೆಯಲ್ಲಿ ಟಿಪ್ಪು ಸುಲ್ತಾನನ ಕಾಲದಲ್ಲಿ ವಿಧಿಸುತ್ತಿದ್ದ ತೆರಿಗೆಗಳು ಸುಂಕ, ದಂಡಗಳನ್ನು ಹೆಸರಿಸುವಾಗ ದೇವಚಂದ್ರನು ಚರಾದಾಯವೆಂದು 'ಬಾಯಿತಪ್ಪು', 'ಕೈತಪ್ಪು', ದಂಡಗಳೊಂದಿಗೆ 'ಇರಳತಪ್ಪು ತೊಂಡು' ಬಳಸಿರುವುದರಿಂದ ಇದರ ಅರ್ಥವು ಇಲ್ಲಿ ನೈತಿಕ ಸ್ವೇಚ್ಛಾವೃತ್ತಿಗೆ ವಿಧಿಸುವ ದಂಡವೆಂಬುದನ್ನು ತಿಳಿಯಬಹುದೆಂದು ವಿವರಿಸಿ ಅಂತಹ ಹೆಣ್ಣುಗಳು ಹಾಗೂ ಅವರ ಪರಿವಾರದವರಿಂದ ದಂಡ ವಸೂಲು ಮಾಡಿ ಮುಚ್ಚಳಿಕೆ ಬರೆಸಿಕೊಂಡು, ಆಕೆಯನ್ನು ಕುಲದಿಂದ ಹೊರಗೆ ಇಟ್ಟ ಉದಾಹರಣೆಗಳನ್ನು ನೀಡಿದರು.

ಘಟಸ್ಫೋಟವೆಂಬುದು ಬದುಕಿರುವಾಗಲೇ ತಪ್ಪಿಸತಸ್ಥರಿಗೆ ನೆರವೇರಿಸುವ ಒಂದು ವಿದಾಯ ಎಂದು ತಿಳಿಸಿದರು.

ಈ ಬಗ್ಗೆ ನಡೆದ ಚರ್ಚೆಯಲ್ಲಿ ಡಾ.ಆರ್.ಲಕ್ಷ್ಮೀನಾರಾಯಣ, ಡಾ. ವಿಜಯಾ ಸುಬ್ಬರಾಜ್, ರವೀಂದ್ರನಾಥ, ಡಾ. ಅಬ್ದುಲ್ ಬಶೀರ್ ಮುಂತಾದವರು ಭಾಗವಹಿಸಿದ್ದರು.

ರವೀಂದ್ರನಾಥ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಪಂಚಾಮೃತ ಇಂಚರದಲ್ಲಿ ಎಂ.ವಿ.ಸೀ ಅವರಿಗೆ ಅರ್ಥಪೂರ್ಣ ಕವಿನಮನ

ಬೆಂಗಳೂರಿನ ಸಹಕಾರ ನಗರದಲ್ಲಿರುವ "ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯು" ತಿಂಗಳ ಕಾರ್ಯಕ್ರಮ ಇಂಚರ ೯೩ನ್ನು ಅಕಾಡೆಮಿಯ ಆವರಣದಲ್ಲಿ ಹಿರಿಯ ಕವಿಗಳಾದ ಎಂ.ವಿ.ಸೀತಾರಾಮಯ್ಯ ಮತ್ತು ದಿನಕರ ದೇಸಾಯಿಯವರಿಗೆ ನುಡಿ-ವಾಚನ, ಗಾಯನದ ಮೂಲಕ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.

ಪ್ರತಿ ತಿಂಗಳು ನಡೆಸಿಕೊಂಡು ಬರುತ್ತಿರುವ ಕವಿನಮನ ಕಾರ್ಯಕ್ರಮದಲ್ಲಿ ಕವಿ ಭ.ರಾ. ವಿಜಯ ಕುಮಾರ್‌ರವರು "ಕುಮಾರವ್ಯಾಸ ಭಾರತ" ರಚನೆಕಾರ ಕುಮಾರ ವ್ಯಾಸರನ್ನು (ನಾರಾಯಣಪ್ಪ) ಉಲ್ಲೇಖಿಸಿ ಅವರ ಕನ್ನಡ ಕಾವ್ಯ ಪರಂಪರೆ ನೀಡಿದ ಕೊಡುಗೆಯನ್ನು ಮತ್ತು ಹಳೆಯ ಹಾಗೂ ಹೊಸಗನ್ನಡ ಉಪಯೋಗಿಸಿದ ರೀತಿಯನ್ನು ತಿಳಿಸಿ. ಸುಧೆ ಸುರಿಯುವ ತಿಂಗಳ ಕಳೆ (ಎಂ.ವಿ.ಸೀ), ನನ್ನ ದೇಹದ ಬೂದಿ (ದಿನಕರ ದೇಸಾಯಿ) ಕವಿತೆಗಳನ್ನು ಓದಿದರು.

ತಿಂಗಳ ಕವಿ ಎಂ.ವಿ.ಸೀತಾರಾಮಯ್ಯರವನ್ನು ಪರಿಚಯಿಸಿದ ಕಲಾ ಪೋಷಕರಾದ ಶ್ರೀ ಪಾದರಾವ್ ಮಂಜುನಾಥ್ ಮತ್ತು ಹಿರಿಯ ಗಮಕಿ ನಾರಾಯಣ್ ಅವರು- ಎಂ.ವಿ.ಸೀ ಕನ್ನಡ ನಾಡಿಗೆ ನೀಡಿದ ಕೊಡುಗೆ ಅಪಾರವಾದುದು, ರಾಘವ ಎಂಬ ಕಾವ್ಯನಾಮದಿಂದ ಕಥೆ, ಕಾದಂಬರಿ ವಿಮರ್ಶೆ ಗ್ರಂಥ ಸಂಪಾದನೆ ಹಲವಾರು ಕವಿತೆಗಳನ್ನು, ಮಕ್ಕಳ ಗೀತೆಗಳನ್ನು ರಚಿಸಿದ್ದಾರೆ. ಬಿ.ಎಂ.ಶ್ರೀ ಪ್ರತಿಷ್ಠಾನ ಸ್ಥಾಪನೆ ಅಲ್ಲದೆ ಗೋಕಾ-ಕ್ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.ನಿರಂತರವಾಗಿ ಕನ್ನಡದ ಕೆಲಸಕ್ಕಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ತಿಳಿಸಿ ಅವರ "ನಾನೊಂದು ಕಿರು ಸೊಡರು" ಕವಿತೆಯನ್ನು ಓದಿದರು.

ಗಾಯಕ ಹಿರೇಮಗಳೂರು ಪ್ರದೀಪ್‌ರವರು ಎಂ.ವಿ.ಸೀಅವರ ಕನ್ನಡ ತಾಯಿಗೆ ಮಣಿವಾ. ಜಯಮಾಲೆ ಹಾಗೂ ದಿನಕರ ದೇಸಾಯಿ ಅವರ ದೀನಗಿಂತ ದೇವ ಬಡವ, ಮುಂಜಾವು ಹೂಗಳು ಗೀತೆಗಳನ್ನು ಹಾಡಿದರು. ಗಾಯಕಿ ಗಾಯಿತ್ರಿಕೇಶವ್‌ರವರು ಎಂ.ವಿ.ಸೀರವರ "ಕೊಳಲನೂದುವನಾರೆಗೆಳತಿ" ಹಾಡಿ ಕಲಾಸಕ್ತರನ್ನು ರಂಜಿಸಿದರು.

ಅವಲೋಕನ

ನೆಲದ ನುಡಿಯ ನಂಟು

ಪುಸ್ತಕ: ನೆಲದ ನುಡಿಯ ನಂಟು

ಸಂಪಾದಕರು: ಜಿ ಎಸ್ ಜಯದೇವ್, ಎಚ್ ಎನ್ ಮುರಳೀಧರ

ಪ್ರಕಾಶಕರು: ದೀನಬಂಧು ಶಿಕ್ಷಕರ ಸಂಪನ್ಮೂಲ ಕೇಂದ್ರಕ್ಕಾಗಿ ಎಂಎಂ ಪ್ರಕಾಶನ, ಬೆಂಗಳೂರು

ಪುಟಗಳು ೧೭೦+೧೨ ಬೆಲೆ: ರೂ ೨೦೦

–ಕಲ್ಲುಂಡಿ ನವೀನ್

ಈ ಪುಸ್ತಕವು ಗಾಢವಾದ ಚಿಂತನೆಗೆ ಹಚ್ಚುವ, ಅಧ್ಯಯನ ಪೂರ್ಣ ಪ್ರಸ್ತಾವನೆಯೊಂದಿಗೆ ಆರಂಭವಾಗುತ್ತದೆ. ಪುಸ್ತಕವನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ: ಶೀರ್ಷಿಕೆಗಳನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳಲಾಗಿದೆ. ತಾತ್ವಿಕತೆ,ವಾಸ್ತವಿಕತೆ, ಸಮಕಾಲೀನ ಚಿಂತನೆ – ಚರ್ಚೆ ಈ ಹರವಿನಲ್ಲಿ ಮುವ್ವತ್ತೈದು ಲೇಖನಗಳು ವಿಷಯವನ್ನು ಅಚ್ಚು ಕಟ್ಟಾಗಿ ಮಂಡಿಸುತ್ತಾ ಹೋಗುತ್ತವೆ. ವಿಭಾಗಗಳ ಆಯ್ಕೆ ಸಂಪಾದಕರ ಬದ್ಧತೆಯನ್ನು ತೋರಿಸುತ್ತದೆ. ಸಂಪಾದನೆಯ ವಿಷಯ ಮಂಡನೆಯ ಗಹನತೆ ಎಲ್ಲೂ ಸಡಿಲವಾಗದಂತೆ ಸಂಪಾದಿಸಲಾಗಿದೆ. ನಡುನಡುವೆ ಅನೇಕ ಶಿಕ್ಷಣ ತಜ್ಞರು ಹಾಗೂ ವಿಜ್ಞಾನಿಗಳ ಅಭಿಪ್ರಾಯವನ್ನು ಬಾಕ್ಸ್ ರೂಪದಲ್ಲಿ ಒದಗಿಸಿದ್ದು ವಿಷಯ ಹೆಚ್ಚು ಸ್ಪುಟವೂ ಗಟ್ಟಿಯೂ ಆಗುವಂತೆ ಮಾಡಿದೆ. (ಹಾಗೆಯೇ ಪುಸ್ತಕ ವಿನ್ಯಾಸಕ್ಕೆ ಒಂದು ಮೆರುಗನ್ನೂ ತಂದಿದೆ!).



ಮೊದಲ ಭಾಗ (ತಾತ್ವಿಕತೆ) ಮಹಾತ್ಮ ಗಾಂಧಿಯವರ ಶಿಕ್ಷಣ ಕುರಿತ ಅನೇಕ ಲೇಖನಗಳಿಂದ ಪುಸ್ತಕದ ಚೌಕಟ್ಟಿಗೆ ಹೊಂದುವ ಭಾಗಗಳನ್ನು ತೆಗೆದುಕೊಳ್ಳಲಾಗಿದೆ. ಗಾಂಧಿಯವರ ಚಿಂತನೆಗಳು ಇಂದಿಗೂ ಅಂದಿನಷ್ಟೇ ಯುಕ್ತವಾಗಿದೆ ಎಂಬುದು ಹೊಳೆಯದಿರದು.ಮಾತೃಭಾಷೆಯಲ್ಲಿ ಶಿಕ್ಷಣವಾಗದಿದ್ದರೆ ಏನೆಲ್ಲ ಆಪತ್ತುಗಳು ಸಂಭವಿಸುತ್ತವೆ ಎಂಬುದನ್ನು ಆಪ್ತವಾಗಿ ಇವು ಗೊತ್ತುಮಾಡಿಕೊಡುತ್ತವೆ. ಇದನ್ನು ಅನುಸರಿಸಿ ಕುವೆಂಪು ಅವರ ಲೇಖನ ವಿಷಯವನ್ನು ವಿಸ್ತರಿಸುತ್ತಾ ಹೋಗಿ ಎಂತಹ ಇಂಗ್ಲಿಷ್?ಯಾರಿಗೆ?ಎಷ್ಟು?ಎಂದು ವಿವೇಚಿಸಿದ್ದಾರೆ.ಆನಂತರ ಕಂಬಾರ ಹಾಗೂ ದೇವನೂರರ ವಿಚಾರಧಾರೆ ಆಗಬೇಕಾಗಿರುವುದನ್ನು ಆಗಮಾಡಿಸ ಬಿಡದಿರುವುನ್ನು ಚರ್ಚಿಸಿದ್ದಾರೆ.ಸರ್ಕಾರಗಳ ಇಬ್ಬಂದಿ ನಿಲುವುಗಳನ್ನು ಚರ್ಚಿಸಿದ್ದಾರೆ.ಮುಂದೆ ಬರಗೂರರ ಕ್ರಿಯಾಯೋಜನೆಯನ್ನು ನಿರೂಪಿಸಿದ್ದಾರೆ. ಮುಂದೆ ಡಿ ಎಸ್ ನಾಗಭೂಷಣರ ಲೇಖನ ವಿಷಯಕ್ಕೆ ಲೋಹಿಯಾರ ಚಿಂತನೆಗಳನ್ನು ಸೇರಿಸಿ ಮತ್ತಷ್ಟು ಸಾಂದ್ರವಾಗಿ ಮಾಡುತ್ತದೆ.ಈ ಲೇಖನದ ಕೊನೆಯಲ್ಲಿರುವ ಬಾಕ್ಸ್ ಭೈರಪ್ಪನವರ ಅಭಿಪ್ರಾಯವನ್ನು ಕೊಡಲಾಗಿದೆ. ಮುಂದೆ ಶಿಕ್ಷಣ ತಜ್ಞರಾದ ಡಾ ನಿರಂಜನಾರಾಧ್ಯರು ಈ ಭಾಗದಲ್ಲಿನ "ಸಾಮಾಜಿಕ ನ್ಯಾಯದ ಮೊದಲ ಹೆಜ್ಜೆ ಮಾತೃಭಾಷಾ ಶಿಕ್ಷಣ" ಎಂಬ ಎರಡು ಪುಟದ ಲೇಖನದಲ್ಲಿ ಇಡೀ ವಿಷಯವನ್ನು ಸಮಗ್ರವಾಗಿ ತಂದಿದ್ದಾರೆ.

ಮುಂದೆ ಇದೇ ತಾತ್ವಿಕತೆಯ ಭಾಗದಲ್ಲಿ ಧರ್ಮಪಾಲರ ಚಿಂತನೆಗಳನ್ನು ಶೈಕ್ಷಣಿಕ ಕ್ಷೇತ್ರದ ಬಿಕ್ಕಟ್ಟುಗಳ ಮೂಲಕ ಚರ್ಚಿಸಿದ್ದಾರೆ ಕೆ ವಿ ಅಕ್ಷರ ಅವರು.ಈ ವಿಭಾಗದ ಕೊನೆಯಲ್ಲಿ ಬಿಎಂಶ್ರೀಯವರ ಪ್ರಸಿದ್ಧ ಭಾಷಣ "ಕನ್ನಡ ನಾಡಿಗೆ ಕನ್ನಡವೇ ಗತಿ" ಇದರಲ್ಲಿನ ಶಿಕ್ಷಣಕ್ಕೆ ಮುಖ್ಯವಾದ ಭಾಗವನ್ನು ಉದ್ಧರಿಸಲಾಗಿದೆ.ಇದು ಪುಸ್ತಕಕ್ಕೆ ಒಂದು ಮೌಲ್ಯವನ್ನು ತಂದು–ಕೊಟ್ಟಿದೆ ಹಾಗೂ ತಾತ್ವಿಕತೆಯ ಭಾಗಕ್ಕೆ ಒಂದು ಗಾಂಭೀರ್ಯದ ತೆರೆಯನ್ನು ಎಳೆದಿದೆ.

ಮುಂದೆ ಎರಡನೆಯ ಭಾಗ ವಾಸ್ತವಿಕತೆ. ಡಾ ಸಿ ಆರ್ ಚಂದ್ರಶೇಖರರ ಲೇಖನದೊಂದಿಗೆ ಆರಂಭವಾಗುತ್ತದೆ. ಮಾತೃಭಾಷೆಯಲ್ಲಿನ ಕಲಿಕೆ ಏಕೆ ಮುಖ್ಯ ಎಂಬ ವಾಸ್ತವಾಂಶಗಳನ್ನು ಈ ಮನೋವೈದ್ಯರು ಯುಕ್ತವಾಗಿ ವಿವರಿಸಿದ್ದಾರೆ. ಭಾಷಾ ಮಾಧ್ಯಮ ಮಾತೃಭಾಷೆಯೇ ಆಗಬೇಕು ಎಂದು ಒಂದು ರೀತಿಯ ಗುಪ್ತಚಳವಳಿಯನ್ನೇ ಮಾಡಿಕೊಂಡು ಬಂದಿರುವ ಚಿ ವಿ ಶ್ರೀನಾಥಶಾಸ್ತ್ರಿಗಳ ಲೇಖನ ಅನೇಕ ಮೌಲಿಕ ಅಂಶಗಳನ್ನು ನೀಡುತ್ತದೆ.

ಮುಂದೆ ಶ್ರೀ ಜಯದೇವ ಅವರು ಶಿಶುಕೇಂದ್ರಿತ ಶಿಕ್ಷಣ ಹೇಗೆ ಶಾಲಾ ವಾತಾವರಣ ತಂದಿಡುವ ಹೊರೆಯನ್ನು ಕಡಿಮೆ ಮಾಡುತ್ತದೆ ಎಂಬುದನ್ನು ವಿವರಿಸಿದ್ದಾರೆ. ಶಿವರಾಮ ಕಾರಂತರು ಒಂದೆಡೆ ನರ್ಸರಿ ಶಾಲೆಗಳನ್ನು ಶಿಶುಮರ್ದನ ಕೇಂದ್ರಗಳೆಂದು ಕರೆದಿದ್ದರು! ಇಲ್ಲಿನ ಒಂದು ಪಾಕಿಸ್ತಾನಿ ಕವನ ಇಡೀ ವಿಷಯವನ್ನು ನೇರ ಬಯಲಿಗೆ ತಂದಿಡುತ್ತದೆ. ಇಲ್ಲಿ ಅನೇಕ ಮುಖ್ಯ ಶೀರ್ಷಿಕೆಗಳಲ್ಲಿ ಶಿಶುಕೇಂದ್ರಿತ ಶಿಕ್ಷಣವನ್ನು ವಿವರಿಸುತ್ತಾ ಸಾಗುತ್ತಾರೆ ಜಯದೇವ್. ಪ್ರೊ ಜೋಗಾ ಸಿಂಗ್ ಅವರ ಲೇಖನ ಮಹತ್ವದ ವಿಷಯಗಳನ್ನು ಹೇಳುತ್ತಾ ವಿವಿಧ ದೇಶಗಳಲ್ಲಿ ಮಾತೃಭಾಷ ಶಿಕ್ಷಣವನ್ನು ಹೇಗೆ ಅಳವಡಿಸಲಾಗಿದೆ ಎಂಬುದನ್ನು ಅದರ ಜೊತೆಗೆ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಹೇಗೆ ಸೇರಿಸಿಕೊಂಡಿದ್ದಾರೆ ಎಂದು ತೋರುತ್ತದೆ. ಈ ಲೇಖನದ ಕೊನೆಯಲ್ಲಿನ ಬಾಕ್ಸ್‌ನಲ್ಲಿ ಜಿ ಟಿ ನಾರಾಯಣರಾವ್ ಅವರ ಒಂದು ಬರಹದ ಭಾಗ ಮಾತೃಭಾಷಾ ಶಿಕ್ಷಣ ಹೇಗೆ ಮೈಕಲ್ ಫ್ಯಾರೆಡೇಯಂತಹ ವಿಜ್ಞಾನಿಯನ್ನು ರೂಪಿಸಿತು ಎಂಬುದನ್ನು ತೋರಿಸುತ್ತದೆ. ಮುಂದೆ ರಾಜೇಶ್ವರಿ ತೇಜಸ್ವಿಯವರ ಬರೆಹ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸಿದ್ದರಿಂದ ಆದ ಪ್ರಯೋಜನವನ್ನು ಅತಿಸರಳವಾದ ಮಾತುಗಳಲ್ಲಿ ನಿರೂಪಿಸಿದ್ದಾರೆ. ಮಾತೃಭಾಷೆಯಲ್ಲಿ ಶಿಕ್ಷಣವನ್ನು ಏಕೆ ಕೊಡಬೇಕು ಎಂಬ ಪ್ರಶ್ನೆಗೆ ಇಲ್ಲಿ ಸರಳ ಉತ್ತರಗಳಿವೆ.

ಮುಂದಿನ ಸಮಾಕಾಲೀನ ಚಿಂತನೆ–ಚರ್ಚೆ ವಿಭಾಗ ಪ್ರಸ್ತುತ ಜಗತ್ತಿನ ಸಮಸ್ಯೆಗಳನ್ನು ವಾಸ್ತವ ಸ್ಥಿತಿಯನ್ನು ತೋರುತ್ತದೆ. ಇಲ್ಲಿ "ಕನ್ನಡ ಶಾಲೆಗಳ ಅಳಿವು–ಉಳಿವು" ಎಂಬ ಲೇಖನದಲ್ಲಿ ಲೇಖಕರಾದ ಶ್ರೀ ಜಯದೇವ್ "ಇಂಗ್ಲಿಷ್ ಅನ್ನದ ಭಾಷೆ ಅಲ್ಲ" ಎಂಬ ಬಹುದೊಡ್ಡ ಸತ್ಯವನ್ನು ಅನಾವರಣ ಮಾಡಿದ್ದಾರೆ.

ಆರ್ ಟಿ ಇ ಎಂಬ ಒಂದು ಒಳ್ಳೆಯ ಯೋಜನೆ ಹೇಗೆ ಭ್ರಷ್ಟ ವ್ಯವಸ್ಥೆಗೆ ಸಿಲುಕಿ ಅವಕಾಶಗಳು ಶ್ರೀಮಂತರ ಪಾಲಾಗಿವೆ ಎಂಬುದನ್ನು ತೋರಿಸುವ ಲೇಖನಗಳಿವೆ. ಹೀಗೆಯೇ ಡಾ ನಿರಂಜನಾರಾಧ್ಯರು ಇಂಗ್ಲಿಷ್ ಮಾಧ್ಯಮದ ಸರ್ಕಾರಿ ಶಾಲೆಗಳಿಂದಲೂ ಪ್ರಯೋಜನವಿಲ್ಲ ಎಂಬುದನ್ನು ಸಾರಿದ್ದಾರೆ. ಈ ವಿಭಾಗದ ಕೊನೆಯಲ್ಲಿ ನ್ಯಾಯಾಲಯಗಳು ಹಾಗೂ ಭಾಷಾ ಮಾಧ್ಯಮವನ್ನು ಕುರಿತಾಗಿದ್ದು ಪುಸ್ತಕದ ಮೌಲ್ಯವನ್ನು ಅಪಾರವಾಗಿ ಹೆಚ್ಚಿಸಿದೆ. ಅನುಬಂಧಗಳಾಗಿರುವ ಮೂರು ಸಂಗ್ರಹಗಳು/ವರದಿಗಳು ಜೊತೆಗೆ ಡಾ ಸತ್ಯನಾರಾಯಣರ ಲೇಖನ ಪುಸ್ತಕದ ಒಳಪಿಡಿಗೆ ಅಗತ್ಯ ಆಧಾರಗಳನ್ನು ಒದಗಿಸಿವೆ.

ಶಿಕ್ಷಣ ವ್ಯವಸ್ಥೆ ರಾಷ್ಟ್ರದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಅತಿಮಹತ್ವದ ಕಾರ್ಯ. ಅದನ್ನು ಹೇಗೆ ಮಾಡಬೇಕು ಎಂಬುದು, ಈ ಪುಸ್ತಕದಲ್ಲಿ ಅದರ ಎಲ್ಲ ಗಹನ ಆಯಾಮಗಳಲ್ಲಿ ಚರ್ಚಿಸಲಾಗಿದೆ.

ಅವಲೋಕನ

ಮಹಾತ್ಮ ಗಾಂಧಿ ಮತ್ತು ಕನ್ನಡ ಸಾಹಿತ್ಯ ಅನುಸಂಧಾನದ ಮಾದರಿಗಳು.

ಪ್ರಧಾನ ಸಂಪಾದಕರು: ಡಾ. ಗಣೇಶ್‌ದೇವಿ; ಸಂಪಾದಕರು : ಡಾ. ಸಿ.ಎನ್. ರಾಮಚಂದ್ರನ್,

ಪ್ರಕಾಶಕರು : ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು,ಪ್ರಥಮ ಮುದ್ರಣ : ೨೦೧೯,

ಪುಟಗಳು : xxxvi+೩೮೭=೪೨೩, ಬೆಲೆ: ರೂ. ೪೦೦/– ಡೆಮಿ ೧/೮.

–ಡಾ. ಎನ್. ಗೋಪಾಲಕೃಷ್ಣ

ಮಹಾತ್ಮ ಗಾಂಧೀಜಿಯವರ ೧೫೦ನೆಯ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಭಾರತೀಯ ವಿದ್ಯಾಭವನವು ಒಂದು ಮಹತ್ವದ ಯೋಜನೆಯಡಿಯಲ್ಲಿ ಪ್ರಥಮ ಕುಸುಮವಾಗಿ ಹೊರತಂದಿರುವ ಕೃತಿಯೇ "ಮಹಾತ್ಮ ಗಾಂಧಿ ಮತ್ತು ಕನ್ನಡ ಸಾಹಿತ್ಯ".ಇದರ ಸಂಪಾದಕರು ಡಾ. ಸಿ.ಎನ್. ರಾಮಚಂದ್ರನ್. ಈ ಕೃತಿಯ ಇಂಗ್ಲಿಷ್ ಆವೃತ್ತಿ "Mahatma Gandhi in Kannada Literature"ನ ಸಂಪಾದಕರೂ ಡಾ. ಸಿ.ಎನ್. ರಾಮಚಂದ್ರನ್ ಅವರೇ ಆಗಿದ್ದಾರೆ. ಎರಡೂ ಕೃತಿಗಳು ಅಕ್ಟೋಬರ್೨, ೨೦೧೯ರಂದು ಬಿಡುಗಡೆಯಾಗಿವೆ.

ಈ ಕೃತಿಯಲ್ಲಿ ಕಾವ್ಯ, ಕಥನ, ಸಾಹಿತ್ಯ, ಸ್ಮೃತಿಕೋಶ ಮತ್ತು ವೈಚಾರಿಕ ಸಾಹಿತ್ಯ ಎಂಬ ನಾಲ್ಕು ಭಾಗಗಳಿವೆ. ೧೬೧ ಪುಟಗಳ ಕಾವ್ಯ ಸಂಪುಟದಲ್ಲಿ ೭೫ ಕನ್ನಡದ ಪ್ರಸಿದ್ಧ ಲೇಖಕ, ಲೇಖಕಿಯರು ಆಗಿಂದಾಗ್ಗೆ ಬರೆದು ಪ್ರಕಟಿಸಿರುವ ಗಾಂಧೀಜಿಯವರ ಬಗೆಗಿನ ಕವನಗಳನ್ನು ಸಂಗ್ರಹಿಸಿದ್ದಾರೆ. ಒಟ್ಟಾರೆಯಾಗಿ ಈವರೆಗೆ ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತು ಸುಮಾರು ೪೦೦ ಕವನ/ಕವನ ಗುಚ್ಛಗಳು ಪ್ರಕಟವಾಗಿರುವ ಮಾಹಿತಿ ದೊರೆಯುತ್ತದೆ.ಗಾಂಧೀಜಿಯವರ ಬಗ್ಗೆ ಈವರೆಗೆ ಆರು ಸಂಕಲನಗಳು ಕನ್ನಡದಲ್ಲಿ ಪ್ರಕಟವಾಗಿರುವುದನ್ನು, ಮೊದಲ ಸಂಕಲನ ೧೯೫೨ರಲ್ಲೇ ಪ್ರಕಟವಾದುದನ್ನು ಸಂಪಾದಕರು ತಿಳಿಸುತ್ತಾರೆ.

೧೯೨೫ರಿಂದ ೧೯೫೦ರವರೆಗಿನ ವರ್ಗದ ಕವಿಗಳು ಗಾಂಧೀಜಿಯವರ ಸಮಕಾಲೀನರು. ಗಾಂಧೀಜಿಯವರನ್ನು ಹತ್ತಿರದಿಂದ ಕಂಡವರು, ಅವರಿಂದ ಪ್ರಭಾವಿತರಾದವರು, ಪೂಜ್ಯಭಾವ ಹೊಂದಿದ್ದವರಾಗಿದ್ದರು.ಅವತಾರಗಳ ಹಾಗೂ ಪವಾಡಗಳ ಕಾಲ ಮುಗಿದು ಇಂದು ಬುದ್ಧ–ಕ್ರೈಸ್ತ–ಗಾಂಧಿ' ಮುಂತಾದವರನ್ನು ಮಾನವರಂತೆಯೇ, ಆದರೆ ಮಾನವತೆಯ ಏಳಿಗೆಗಾಗಿ ಬದುಕನ್ನು ಮುಡಿಪಾಗಿಟ್ಟ ಮಹಾನ್ ಮಾನವರಂತೆ ನೋಡುವ ಕಾಲ ಬಂದಿದೆ ಎಂಬುದಾಗಿ ಮಹಾಕವಿ ಕುವೆಂಪು ಹೇಳುತ್ತಾರೆ.

ಗಾಂಧೀಜಿ ಇಂದು ಆಪ್ತಸ್ತುತವಾಗಿರುವುದನ್ನು ಜಿ.ಎಸ್.ಶಿವರುದ್ರಪ್ಪನವರು ಈ ಕೆಳಗಿನಂತೆ ದಾಖಲಿಸುತ್ತಾರೆ.

"ನೀನಿದ್ದೆ ಎಂಬುದಕ್ಕೆ ಸ್ಮಾರಕ ನಿರ್ಮಿಸುವುದನ್ನು/
ನಾವು ಮರೆತಿಲ್ಲ. ಇಗೋ ಈ ಚೌಕದಲ್ಲಿ,
ಆ ಮಹಲಿನಲ್ಲಿ/ಈ ಪಾರ್ಕಿನಲ್ಲಿ ನಿನ್ನ
ವಿಗ್ರಹವನ್ನು ಸ್ಥಾಪಿಸಿ ವರ್ಷ ವರ್ಷವೂ
ನಿನ್ನ ನೆನಪುಗಳಲ್ಲಿ/ ಕೈ ತೊಳೆದುಕೊಳ್ಳುತ್ತಿದ್ದೇವೆ."

ವಾಕಿಂಗ್ ಬಂದ ತರುಣ ದಂಪತಿಗಳು ಗಾಂಧಿ ಪ್ರತಿಮೆಯನ್ನು ನೋಡಿ 'ಪಾಪ ಯಾರದ್ದೋ ಮುದುಕನದು ಈ ಪ್ರತಿಮೆ' ಎಂದುಕೊಳ್ಳುತ್ತಾರೆ.

ಇನ್ನು ಕಥನ ಸಾಹಿತ್ಯದಲ್ಲಿ ಬೆಸಗರಹಳ್ಳಿ ರಾಮಣ್ಣನವರ "ಗಾಂಧೀ", ಪೂರ್ಣಚಂದ್ರ ತೇಜಸ್ವಿಯವರ "ಗಾಂಧಿಯ ದೆಸೆಯಿಂದ" ಮತ್ತು ಕುಂ.ವೀರಭದ್ರಪ್ಪನವರ "ಕೂರ್ಮಾವತಾರ" ಎಂಬ ಸಣ್ಣಕಥೆಗಳು ಪ್ರಕಟವಾಗಿದೆ.

ಬೋಳುವಾರು ಮೊಹಮದ್ ಕುಂಞ ಅದರ "ಪಾಪು ಗಾಂಧಿ, ಗಾಂಧಿ ಬಾಪು ಆದ ಕಥೆ"(ಆಯ್ದಭಾಗ) ಒಂದು ಕಾದಂಬರಿ ಆಗಿದೆ. ಮೂರನೇ ಭಾಗದಲ್ಲಿ ಹರ್ಡೇಕರ್ ಮಂಜಪ್ಪನವರ 'ಮಹಾತ್ಮಗಾಂಧಿಯವರ ಚರಿತ್ರೆ', ಪಿ.ಆರ್.ರಾಮಯ್ಯನವರ "ಗಾಂಧೀಜಿ ಮಹಾತ್ಮರಾಗುವ ಮೊದಲು" ಮತ್ತು ವಸುದೇವ ಭೂಪಾಲಂ ಅವರ "ಬಾಪೂಜಿಯವರ ಕನ್ನಡ ಕಲಿಕೆ" ಸ್ಮೃತಿಕೇಶದಡಿಯಲ್ಲಿ ವಿಭಾಗಿಸಲಾದ ಕೃತಿಗಳು.

ವೈಚಾರಿಕ ಸಾಹಿತ್ಯದಡಿಯಲ್ಲಿ ನಾಲ್ಕನೇ ಭಾಗದಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮ, ಕುವೆಂಪು, ಜಿ.ವಿ.ನಾರಾಯಣ ಮೂರ್ತಿ, ಎಂ.ವಿ. ಲಕ್ಷ್ಮಿ ಮತ್ತು ಎಲ್.ಟಿ. ಶರ್ಮರವರ ವ್ಯಾಖ್ಯಾನಗಳು ಗಾಂಧೀಜಿಯವರನ್ನು ಕುರಿತ ಕನ್ನಡ ಕೃತಿಗಳಾಗಿವೆ.ಕೊನೆಯದಾಗಿ ಗೌರೀಶ ಕಾಯ್ಕಿಣಿ, ಯು.ಆರ್.ಅನಂತಮೂರ್ತಿ, ಕೆ.ಸತ್ಯನಾರಾಯಣ, ಹರಿಹರಪ್ರಿಯ, ಅರವಿಂದ ಮಾಲಗತ್ತಿ ಮತ್ತು ಎ.ಎನ್. ಲಕ್ಷ್ಮೀನಾರಾಯಣ ಅವರು ರಚಿಸಿದ ವಾದ–ವಿವಾದಗಳು ಇಲ್ಲಿವೆ.

ಈ ಕೃತಿಯಲ್ಲಿ ಸಂಕಲನವಾಗಿರುವ ಪ್ರತಿಯೊಂದು ಕವನ, ಲೇಖನ, ಸ್ಮೃತಿ, ವಾದ–ವಿವಾದ, ಕಾದಂಬರಿ, ಸಣ್ಣ ಕತೆ–ಎಲ್ಲವನ್ನೂ ಓದಿಯೇ ಆಸ್ವಾದಿಸತಕ್ಕದ್ದು. ಕನ್ನಡದ ಬಹುಪಾಲು ಹಿರಿಯ ತಲೆಮಾರಿನ ಲೇಖಕರೆಲ್ಲ ಗಾಂಧೀಜಿಯವರ ಬಗ್ಗೆ ಬರೆದಿರುವುದನ್ನು ಸಂಪಾದಕರು ಒಂದೆಡೆ ತಂದು ಓದುಗರು ಹತ್ತಾರು ಕಡೆ ಹುಡುಕುವ ಅಗತ್ಯ ಇಲ್ಲವಾಗಿದೆ. ಗಾಂಧೀಜಿಯವರ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ಕನ್ನಡಿಗರು ಓದಲೇಬೇಕಾದ ಕೃತಿ ಇದು.

ಒಂದನೇ ಪುಟದಿಂದ

ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ ಮತ್ತು ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭ

ಮುಖ್ಯವಾಗಿ ಚಾಮರಾಜನಗರದ ಪರಿಸರದ ಅನುಭವಗಳನ್ನು ಕಥಾವಸ್ತುವಾಗಿ ಮಾಡಿಕೊಂಡು ಅಲ್ಲಿಯ ಪ್ರಾದೇಶಿಕ ಭಾಷೆಯಲ್ಲಿ 'ಧೂಪದ ಮಕ್ಕಳು' ಕಥಾ ಸಂಕಲನ ಕಟ್ಟಿಕೊಟ್ಟಿರುವ ಸ್ವಾಮಿ ಪೊನ್ನಾಚಿ ಮತ್ತು ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧಳೂ ಅಪ್ರತಿಮ ಸುಂದರಿಯೂ ಆಗಿದ್ದ ಜಹನಾರಾ ಪರ್ಶಿಯನ್ ಭಾಷೆಯಲ್ಲಿ ತನ್ನ ಆತ್ಮ ಕಥೆ ಬರೆದಿದ್ದು, ಆಗ್ರಾದ ಕೋಟೆಯ ಗೋಡೆಯಲ್ಲಿ ಹುದುಗಿಸಿಟ್ಟಿದ್ದನ್ನು ಪತ್ತೆ ಹಚ್ಚಿದ ಸ್ವೀಡನ್ ಮಹಿಳೆಯ ಇಂಗ್ಲಿಷ್ ಕೃತಿಯನ್ನು ಶ್ರೀ ಸಂತೆ ನಾರಾಯಣಸ್ವಾಮಿ ಅವರು ಅತ್ಯಂತ ಸೊಗಸಾಗಿ ಅನುವಾದಿಸಿ ಕೊಟ್ಟಿರುವ ಬಗ್ಗೆ ತಿಳಿಸಿಕೊಟ್ಟರು.

ಪ್ರಶಸ್ತಿ ಪುರಸ್ಕೃತರಲ್ಲೊಬ್ಬರಾದ ಸ್ವಾಮಿ ಪೊನ್ನಾಚಿಯವರು ತಮ್ಮ ಭಾಷಣದಲ್ಲಿ ಪ್ರಶಸ್ತಿಗಳಿಗಾಗಿ ಲಾಬಿ ನಡೆಯುತ್ತಿರುವ ಸಂದರ್ಭದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನ ಪ್ರಶಸ್ತಿಯ ಆಯ್ಕೆಯಲ್ಲಿ ಪಾರದರ್ಶಕತೆ ಉಳಿಸಿಕೊಂಡಿರುವ ಬಗ್ಗೆ ಶ್ಲಾಘಿಸಿದರು. ಇನ್ನೊಬ್ಬ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸಂತೆ ನಾರಾಯಣ ಸ್ವಾಮಿ ಅವರು ತಮ್ಮ ಭಾಷಣದಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಲೇ ಸಾಹಿತ್ಯ ಕೃತಿಗಳನ್ನು ಓದುವ ಆಸಕ್ತಿ ಬೆಳೆಸಿಕೊಂಡಿದ್ದ ಬಗ್ಗೆ ಹಾಗೂ ಅಕಸ್ಮಾತ್ತಾಗಿ ಅವರ ಇಂಗ್ಲಿಷ್ ಕೃತಿ 'ಜಹನಾರಾ' ಓದಿ ವಿಸ್ಮಿತರಾಗಿ ಕನ್ನಡಕ್ಕೆ ತರಲೇಬೇಕೆಂದು ೩೦ ವರ್ಷಗಳ ಹಿಂದೆಯೇ ಇದನ್ನು ಕನ್ನಡಕ್ಕೆ ತಂದರೂ ಸೇವೆಯಲ್ಲಿದ್ದಾಗ ಪ್ರಕಟಿಸಲು ಸಾಧ್ಯವಾಗದೆ ಅನಂತರ ಈ ಕೃತಿಯನ್ನು ಮುತುವರ್ಜಿಯಿಂದ ಪ್ರಕಟಿಸಲು ಸಾಧ್ಯವಾದ ಬಗ್ಗೆ ತಿಳಿಸಿದರು.

ಗೌರವಾಧ್ಯಕ್ಷರಾದ ಪ್ರೊ.ಎಂ.ಎಚ್. ಕೃಷ್ಣಯ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪುಟ್ಟಸ್ವಾಮಿಯವರ ಅಭಿರುಚಿ ಮತ್ತು ಸಾಹಿತ್ಯಾಸಕ್ತಿಗಳನ್ನು ಕುರಿತು ಹೇಳಿ ನಂತರ ಈ ಅನುವಾದ ಪರಂಪರೆ ಶ್ರೀಯವರಿಂದಲೇ ಪ್ರಾರಂಭವಾಗಿ ಅವರ ಮೊಮ್ಮಗಳ ಪತಿ ಬಾಲುರಾಯರಿಂದಲೂ ಮುಂದುವರಿದ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಪ್ರತಿಷ್ಠಾನದ ಹಿಂದಿನ ಅಧ್ಯಕ್ಷರಾದಿಯಾಗಿ ಈಗಿನ ಪದಾಧಿಕಾರಿಗಳೆಲ್ಲರೂ ಅನುವಾದ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವವರೇ ಆಗಿರುವುದೊಂದು ಯೋಗಾಯೋಗವೆಂದರು.

ಡಾ.ಎಸ್. ಅನಿಲ್ ಕುಮಾರ್ ಅವರು ಕಾರ್ಯಕ್ರಮವನ್ನು ಚೊಕ್ಕವಾಗಿ ನಿರೂಪಿಸಿದರು. ಶ್ರೀ ರವೀಂದ್ರನಾಥ್ ಅವರು ಅತಿಥಿಗಳು ಮತ್ತು ಸಭಿಕರೆಲ್ಲರನ್ನೂ ವಂದಿಸಿದರು. ಡಾ.ವಿಜಯಾಸುಬ್ಬರಾಜ್ ಅವರು ಪ್ರಶಸ್ತಿ ಪುರಸ್ಕೃತರನ್ನು ಕುರಿತ ಅಭಿನಂದನ ಪತ್ರಗಳನ್ನು ವಾಚಿಸಿದರು.

ಕಿರುಪರಿಚಯ

ಶತಾವಧಾನಿ ಡಾ॥ ಆರ್. ಗಣೇಶ್

ಇವರ ಜನನ ೧೯೬೨, ಬಿ.ಇ. (ಮೆಕ್ಯಾನಿಕಲ್) ಎಂ.ಎಸ್ಸಿ.(ಎಂಜಿನಿಯರಿಂಗ್), ಎಂ.ಎ. (ಸಂಸ್ಕೃತ) , ಡಿ.ಲಿಟ್., (ಕನ್ನಡ). ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಹಿಂದೀ, ಪ್ರಾಕೃತಗಳಲ್ಲಿ ವಿಶಾರದರು; ಪಾಲಿ, ಗ್ರೀಕ್, ಲ್ಯಾಟಿನ್ ಮೊದಲಾದ ಹತ್ತಾರು ಭಾಷೆಗಳಲ್ಲಿಯೂ ಪರಿಣತರು. ಭಾರತೀಯ ಸಾಹಿತ್ಯ ಸಂಸ್ಕೃತಿ–ವಿಜ್ಞಾನ–ಅಧ್ಯಾತ್ಮ–ಕಲೆ–ಇತಿಹಾಸಗಳಲ್ಲಿ ಗಾಢಪ್ರೀತಿ. ಅಲಂಕಾರ, ಛಂದಸ್ಸು, ವೇದ–ವೇದಾಂತ, ವ್ಯಾಕರಣ, ಧರ್ಮಶಾಸ್ತ್ರ, ನೃತ್ಯ–ನಾಟಕ, ಯಕ್ಷಗಾನ, ಚಿತ್ರ–ಶಿಲ್ಪ, ಗೀತ–ಸಂಗೀತಾದಿಗಳಲ್ಲಿ ಪರಿಶ್ರಮ; ಭಾರತೀಯ ವಿಜ್ಞಾನ–ತಂತ್ರಜ್ಞಾನ, ಇತಿಹಾಸ, ಸೌಂದರ್ಯ ಮೀಮಾಂಸೆ ಮತ್ತು ಮೌಲ್ಯ ಮೀಮಾಂಸೆಗಳಲ್ಲಿಯೂ ದುಡಿದ ಅನುಭವ.

ಎಂಟು ಭಾಷೆಗಳಲ್ಲಿ ಕವನಿಸಬಲ್ಲ ಗಣೇಶ ಆಶುಕವಿತೆ, ಕಾವ್ಯ–ಚಿತ್ರ ಮುಂತಾದ ಸಾಹಿತ್ಯ ಕ್ರೀಡೆಗಳಿಂದ ಸುಪ್ರಸಿದ್ಧರು. ಸಾವಿರಕ್ಕೂ ಹೆಚ್ಚಿನ ಅಷ್ಟಾವಧಾನಗಳನ್ನೂ ಐದು ಶತಾವಧಾನಗಳನ್ನೂ ಇದುವರೆಗೆ ನೆರವೇರಿಸಿದ್ದಾರೆ. ಇಪ್ಪತ್ತನಾಲ್ಕು ಘಂಟೆಯ ಸತತವಾದ ಆಶುಕವಿತೆಯ ವಿಶ್ವದಾಖಲೆ ಇವರದು. ವಿಭಿನ್ನ ವಿಷಯಗಳನ್ನು ಕುರಿತಂತೆ ಸಹಸ್ರಾರು ಪ್ರವಚನಗಳನ್ನು ನೀಡಿದ್ದಾರೆ. ಈವರೆಗೆ ಇವರ ನಲವತ್ತಕ್ಕೂ ಹೆಚ್ಚು ಗ್ರಂಥಗಳು (ಕವಿತೆ, ಅನುವಾದ, ಸಂಶೋಧನೆ, ಶಾಸ್ತ್ರ–ಸಂಸ್ಕೃತಿ ಚಿಂತನ, ವ್ಯಕ್ತಿಚಿತ್ರ ಮುಂತಾದ ವಿಷಯಗಳನ್ನು ಕುರಿತವು) ಹೊರಬಂದಿವೆ. ನೂರಾರು ಸಂಶೋಧನಲೇಖನಗಳೂ ಪ್ರಕಟವಾಗಿವೆ.

ಕರ್ನಾಟಕ ರಾಜ್ಯದ ರಾಜ್ಯೋತ್ಸವ ‘ಪ್ರಶಸ್ತಿ, ಭಾರತ ಸರ್ಕಾರದ ಬಾದರಾಯಣ ವ್ಯಾಸ ಪುರಸ್ಕಾರವೇ ಮೊದಲಾದ ಪ್ರಶಸ್ತಿಗಳೂ ವಿವಿಧ ಧಾರ್ಮಿಕ ಸಾಂಸ್ಕೃತಿಕ ಸಂಸ್ಥೆಗಳ, ವಿಶ್ವವಿದ್ಯಾಲಯಗಳ ಸಂಮಾನ–ಸತ್ಕಾರಗಳೂ ಗಣೇಶ್ ಅವರನ್ನರಸಿ ಬಂದಿವೆ.

‘ಅವಲೋಕನ’

ನೀವು ರಚಿಸಿದ ಸಾಹಿತ್ಯ ಕೃತಿಯ ವಿಮರ್ಶೆಯನ್ನು ಪ್ರಕಟಿಸಬೇಕೆ?

ಕನ್ನಡ ಭಾಷೆಯಲ್ಲಿ ಹೊಸದಾಗಿ ಅಂದರೆ ಕಳೆದ ಮೂರು ತಿಂಗಳುಗಳ ಅವಧಿಯಲ್ಲಿ ಪ್ರಕಟಗೊಳ್ಳುವ ಮೌಲಿಕ ಸಾಹಿತ್ಯ ಕೃತಿಗಳನ್ನು ಹೊಂಗನಸು ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಪ್ರತಿ ತಿಂಗಳೂ ಹೊಂಗನಸುವಿನಲ್ಲಿ ‘ಅವಲೋಕನ’ ಅಂಕಣದಲ್ಲಿ ಹೊಸದಾಗಿ ಪ್ರಕಟವಾದ ಮೌಲಿಕವಾದ ಸಾಹಿತ್ಯ ಕೃತಿಗಳ ವಿಮರ್ಶೆಗಳನ್ನು ಪ್ರಕಟಿಸಲಾಗುತ್ತಿದೆ. ಆಸಕ್ತ ಲೇಖಕರು ಕಳೆದ ಮೂರು ತಿಂಗಳುಗಳ ಅವಧಿಯಲ್ಲಿ ಪ್ರಕಟಗೊಂಡ ಕೃತಿಗಳ ಒಂದು ಪ್ರತಿಯನ್ನು ನಮಗೆ ತಲುಪಿಸಬಹುದು. ಈ ಅಂಕಣಕ್ಕಾಗಿ ಸ್ವೀಕರಿಸಿದ ಕೃತಿಗಳ ಪ್ರತಿಗಳನ್ನು ಹಿಂದುರಿಗಿಸಲಾಗುವುದಿಲ್ಲ.

HONGANASU KANNADA MONTHLY
RNI No. KAR/KAN/2015/64049
REGISTERED
Post office Registration No.RNP/KA/BGS/2229/2018-2020
dt. 27-10-2017
Office of Posting: Bangalore PSO, Bangalore 560026
Price :Annual Subscription Rs. 20/-
Date of publishing and Posting : 30-10-2019

ಕಿರುಪರಿಚಯ

ಡಾ. ಕೆ. ಪುಟ್ಟಸ್ವಾಮಿ

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಕೆ.ಪುಟ್ಟಸ್ವಾಮಿ ಅವರು ಒಬ್ಬ ಪತ್ರಕರ್ತರಾಗಿ ಲೇಖಕರಾಗಿ, ಅನುವಾದಕರಾಗಿ ಪರಿಸರ, ಕ್ರೀಡೆ ಮತ್ತು ಸಿನಿಮಾ ಇತಿಹಾಸಕಾರ ಮತ್ತು ವಿಮರ್ಶಕರಾಗಿ ಸಹ ಗುರುತಿಸಿಕೊಂಡಿದ್ದಾರೆ.

ವಿದ್ಯಾರ್ಹತೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಕೃಷಿ ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ

ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ

ವೃತ್ತಿ ಜೀವನ: ಪತ್ರಕರ್ತರಾಗಿ ಸೇವೆ, ೧೯೮೫ರಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಗೆ ಸೇರ್ಪಡೆ. ಅನಂತರ ನಿಯೋಜನೆ ಮೇಲೆ ವಿವಿಧ ಇಲಾಖೆಗಳಲ್ಲಿ ಸೇವೆ. ಮುಖ್ಯವಾಗಿ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿ ಸೇವೆ. ಹಾಲಿ ಬೆಸ್ಕಾಂ ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿ.

ಪ್ರಕಟಣೆಗಳು: ಈವರೆಗೆ ಅನುವಾದಗಳು ಸೇರಿದಂತೆ ಕಥನಗಳು ಜೀವನ ಚರಿತ್ರೆಗಳು ವಿಜ್ಞಾನ, ಕ್ರೀಡೆ, ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ೨೪ ಕೃತಿಗಳ ಪ್ರಕಟಣೆ. ನಾಲ್ಕು ಬಹುಮುಖ್ಯ ಸಚಿತ್ರ ಕೋಶಗಳ ಸಂಪಾದನೆ.

ಮುಖ್ಯ ಪ್ರಶಸ್ತಿಗಳು:

* ‘ಸರ್ವೋತ್ತಮ ಸಿನಿಮಾ ಕೃತಿಯಾಗಿ ‘ಸಿನಿಮಾಯಾನ’ ಕೃತಿಗೆ ೫೭ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿಯಲ್ಲಿ ರಾಷ್ಟ್ರಪತಿಯವರ ಸ್ವರ್ಣಕಮಲ ಪುರಸ್ಕಾರ. ಕನ್ನಡಕ್ಕೆ ಈ ವಿಭಾಗದಲ್ಲಿ ಮೊದಲ ರಾಷ್ಟ್ರೀಯ ಪ್ರಶಸ್ತಿ.
* ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡಮಿ ಪುಸ್ತಕ ಬಹುಮಾನ.
* ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ (೨೦೦೦)

ಇತರೆ;ವಿವಿಧ ಚಲನ ಚಿತ್ರೋತ್ಸವಗಳಲ್ಲಿ ತೀರ್ಪುಗಾರರಾಗಿ

* ಭಾರತೀಯ ಪನೋರಮಾ ವಿಭಾಗದ ಚಿತ್ರಗಳ ಆಯ್ಕೆ ಸಮಿತಿ ಸದಸ್ಯರಾಗಿ– ಎರಡು ಬಾರಿ
* ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳ ಸ್ಪರ್ಧಾವಿಭಾಗದಲ್ಲಿ ೨ ಬಾರಿ ತೀರ್ಪುಗಾರರಾಗಿ

Printed and published by : B.R.Ravindranath on behalf of the BMSRI SMARAKA PRATISHTANA, 3rd Main Road, NR Colony, Bangalore - 560019 and printed at Annapoorneshwari Printers, No. 11, 10 ‘C’ Main, 6th Block, Rajajinagar, Bangalore 10. and published at BMSRI SMARAKA PRATISHTANA, 3rd Main Road, NR Colony, Bangalore - 560019 Editor : B.R.Ravindranath

ಅಚ್ಚಾದ ಪುಸ್ತಕ

ತೆರೆದ–ಅಂಚೆ

ಶ್ರೀಮತಿ/ಶ್ರೀ.....

.....

.....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭